ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧	ಬೆಂಗಳೂರು, ಮಂಗಳವಾರ, ೧೮, ಆಗಸ್ಟ್, ೨೦೨೬ (ಶ್ರಾವಣ, ೨೭, ಶಕವರ್ಷ, ೧೯೪೮)	ಸಂಚಿಕೆ ೧೬೦
Volume 161	BENGALURU, TUESDAY, 18, AUGUST, 2026 (SHRAVANA , 27, SHAKAVARSHA, 1948)	Issue 160

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್ , ಐ.ಪಿ.ಎಸ್
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ವಿಷಯ: ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಒಳಭಾಗದ ಪ್ರಮುಖ ರಸ್ತೆಗಳನ್ನು ವಾಹನ ನಿಲುಗಡೆ ನಿಷೇಧ (NO PARKING) ರಸ್ತೆಗಳನ್ನಾಗಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ: 1 ಪೊಲೀಸ್ ಇನ್ಸ್‌ಪೆಕ್ಟರ್ ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆ ರವರ ಸಂ.128/ಸಿಸಿ/ದೇಸಂಪಿಎಸ್/2026 ದಿನಾಂಕ: 13.07.2026.

2 ಎಸಿಪಿ, ಸಂಚಾರ ಈಶಾನ್ಯ ಉಪ-ವಿಭಾಗ,ಬೆಂಗಳೂರು ನಗರ ರವರ ಪತ್ರ ಸಂ.ಅಧಿ/ಪ್ರ/05/ಎಸಿಪಿ/ಸಂ.ಈ.ಉ.ವಿ/2026 ದಿನಾಂಕ: 14.07.2026.

3 ಉಪಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ ರವರ ಸಂ: 10/Notification/ /ಡಿಸಿಪಿ/ಸಂಉ/2026. ದಿ: 16.07.2026

4 ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಷರಾ, ದಿ:30.07.2026

ಪ್ರಸ್ತಾವನೆ:

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಈಶಾನ್ಯ ಉಪವಿಭಾಗ, ಉಪ ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಸಂಚಾರ ಉತ್ತರ ವಿಭಾಗದ ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ T1 Arrival down ramp, P4 Exit, Departure up ramp, T2 Circulation road, Gate no.03 (VVIP Lounge) to New road entry. T1 Arrival Exit to CISF Naka Main road Exit, T2 VIP Exit (South gate) to CISF Naka Main road Exit ಸ್ಥಳ/ರಸ್ತೆಗಳಲ್ಲಿ ಸಾರ್ವಜನಿಕರು ಮತ್ತು ಟಾಕ್ಸಿ ಚಾಲಕರುಗಳು ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ, ಸಂಚಾರ ದಟ್ಟಣೆಯುಂಟಾಗಿ ಅಪಘಾತಗಳಾಗುವ ಸಂಭವವಿರುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಒಳಭಾಗದಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, 1) T1 Arrival down ramp-ನಲ್ಲಿ, 2) P4 Exit ನಲ್ಲಿ- ಪಶ್ಚಿಮದಿಂದ ಪೂರ್ವ 200 ಮೀ, 3) T2 Departure up ramp, 4) T2 Circulation road ನಲ್ಲಿ- ದಕ್ಷಿಣದಿಂದ ಉತ್ತರ 200ಮೀ, 5) Gate no.03 (VVIP Lounge) to New road entry ನಲ್ಲಿ- ಪೂರ್ವದಿಂದ ಪಶ್ಚಿಮ 1270ಮೀ, 6) T1 Arrival Exit to CISF Naka Main road Exit ನಲ್ಲಿ- ಪೂರ್ವದಿಂದ ಪಶ್ಚಿಮ 1330ಮೀ, 7) T2 VIP Exit (South gate) to CISF Naka Main road Exit ನಲ್ಲಿ- ಪೂರ್ವದಿಂದ ಪಶ್ಚಿಮ 1575ಮೀ, ರಸ್ತೆ/ಸ್ಥಳಗಳಲ್ಲಿ ವಾಹನಗಳ ನಿಲುಗಡೆ ನಿಷೇದಿಸಿ, ವಾಹನಗಳ ನಿಲುಗಡೆ ನಿಷೇಧ (NO PARKING) ರಸ್ತೆಗಳನ್ನಾಗಿ ಅಧಿಸೂಚನೆ ಹೊರಡಿಸುವ ಅವಶ್ಯಕತೆ ಇರುವುದಾಗಿ, ಅಧಿಸೂಚನೆಯನ್ನು ಹೊರಡಿಸಲು ಕೋರಿ, ಉಲ್ಲೇಖಿತ ಪತ್ರಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ,ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಒಳಭಾಗದಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, 1) T1 Arrival down ramp-ನಲ್ಲಿ, 2) P4 Exit ನಲ್ಲಿ- ಪಶ್ಚಿಮದಿಂದ ಪೂರ್ವ 200 ಮೀ, 3) T2 Departure up ramp, 4) T2 Circulation road ನಲ್ಲಿ- ದಕ್ಷಿಣದಿಂದ ಉತ್ತರ 200ಮೀ, 5) Gate no.03 (VVIP Lounge) to New road entry ನಲ್ಲಿ- ಪೂರ್ವದಿಂದ ಪಶ್ಚಿಮ 1270ಮೀ, 6) T1 Arrival Exit to CISF Naka Main road Exit ನಲ್ಲಿ- ಪೂರ್ವದಿಂದ ಪಶ್ಚಿಮ 1330ಮೀ, 7) T2 VIP Exit (South gate) to CISF Naka Main road Exit ನಲ್ಲಿ- ಪೂರ್ವದಿಂದ ಪಶ್ಚಿಮ 1575ಮೀ, ರಸ್ತೆ/ಸ್ಥಳಗಳಲ್ಲಿ ವಾಹನಗಳ ನಿಲುಗಡೆ ನಿಷೇಧ (NO PARKING) ರಸ್ತೆಗಳನ್ನಾಗಿ ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

ಆದೇಶ ಸಂಖ್ಯೆ:19/ಅಧಿಸೂಚನೆ/ಜಂ.ಪೊ.ಆ (ಸಂ)/2026,ದಿನಾಂಕ:05.08.2026

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್ ಕುಮಾರ್ ಸಿಂಗ್. ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ** ಆದನಾನು**,** ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ,ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ,ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಒಳಭಾಗದಲ್ಲಿ, ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, 1) T1 Arrival down ramp-ನಲ್ಲಿ, 2) P4 Exit ನಲ್ಲಿ- ಪಶ್ಚಿಮದಿಂದ ಪೂರ್ವ 200 ಮೀ, 3) T2 Departure up ramp, 4) T2 Circulation road ನಲ್ಲಿ- ದಕ್ಷಿಣದಿಂದ ಉತ್ತರ 200ಮೀ, 5) Gate no.03 (VVIP Lounge) to New road entry ನಲ್ಲಿ- ಪೂರ್ವದಿಂದ ಪಶ್ಚಿಮ 1270ಮೀ, 6) T1 Arrival Exit to CISF Naka Main road Exit ನಲ್ಲಿ- ಪೂರ್ವದಿಂದ ಪಶ್ಚಿಮ 1330ಮೀ, 7) T2 VIP Exit (South gate) to CISF Naka Main road Exit ನಲ್ಲಿ- ಪೂರ್ವದಿಂದ ಪಶ್ಚಿಮ 1575ಮೀ, ರಸ್ತೆ/ಸ್ಥಳಗಳಲ್ಲಿ ವಾಹನಗಳ ನಿಲುಗಡೆ ನಿಷೇಧ (NO PARKING) ರಸ್ತೆಯನ್ನಾಗಿ, ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

ವಾಹನಗಳ ನಿಲುಗಡೆ ನಿಷೇಧಿಸಿ (NO PARKING) ರುವ ರಸ್ತೆ ವಿವರ.

ಕ್ರ.ಸಂ	ಸ್ಥಳ/ರಸ್ತೆ	ಇಂದ (ಅಕ್ಷಾಂಶ)	ವರೆಗೆ(ರೇಖಾಂಶ)	ದಿಕ್ಕು
01	T1 Arrival down ramp	13.198605, 13.199503.	77.707266, 77.708321.	ಪಶ್ಚಿಮದಿಂದ ಪೂರ್ವ 200 ಮೀ
02	P4 Exit	13.197703, 13.197523	77.708299. 77.708143	
03	T2 Departure up ramp	13.19948, 13.19854	77.712037, 77.713351	ದಕ್ಷಿಣದಿಂದ ಉತ್ತರ 200ಮೀ
04	T2 Circulation road	13.197443 13.198451	77.712185 77.713156	

05	Gate no.03 (VVIP Lounge) to New road entry	13.20023163 13.19805640	77.7065272 77.69946581	ಪೂರ್ವದಿಂದ ಪಶ್ಚಿಮ 1270ಮೀ
06	T1 Arrival Exit to CISF Naka Main road Exit	13.199504 13.197969457	77.711661 77.702712927	ಪೂರ್ವದಿಂದ ಪಶ್ಚಿಮ 1330ಮೀ
07	T2 VIP Exit (South gate) to CISF Naka Main road Exit	13.1973543 13.197969457	77.71565028 77.702712927	ಪೂರ್ವದಿಂದ ಪಶ್ಚಿಮ 1575ಮೀ

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ:05.08.2026 ರಿಂದ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

(**ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್**)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

PR-1066

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್ , ಐ.ಪಿ.ಎಸ್
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ವಿಷಯ: ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ-48 ರ ಸರ್ವೀಸ್ ರಸ್ತೆಯಲ್ಲಿ ವಾಹನಗಳ ನಿಲುಗಡೆ ನಿಷೇಧಿಸಿ ಹಾಗೂ ಏಕಮುಖ ಸಂಚಾರ ರಸ್ತೆಗಳನ್ನಾಗಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ: 1 ಪೊಲೀಸ್ ಇನ್ಸ್‌ಪೆಕ್ಟರ್ ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆ ರವರ ಪತ್ರ ಸಂ:100/ಸಿಸಿ/ಚಿಬಾ/ಸಂ.ಪೊ.ಠಾ/2026.ದಿ:25.05.2026.
2 ಎಸಿಪಿ ಸಂಚಾರ ಉತ್ತರ ಉಪ ವಿಭಾಗ ರವರ ಪತ್ರ ಸಂ:79/ಸಿಸಿ/ಎಸಿಪಿ/ಸಂಉಉವಿ/2026.ದಿ:29.05.2026
3 ಉಪ ಪೊಲೀಸ್ ಆಯುಕ್ತರು,ಸಂಚಾರ ಉತ್ತರ ವಿಭಾಗ ಬೆಂಗಳೂರು ನಗರ ರವರ ಸಂ:09/ಅಧಿಸೂಚನೆ/ಡಿಸಿಪಿ/ಸಂ.ಉ/2026.ದಿ:15.07.2026.
4 ಜಂಟಿ ಪೊಲೀಸ್ ಆಯುಕ್ತರು ಸಂಚಾರ,ಬೆಂಗಳೂರು ನಗರ ರವರ ಷರಾ ದಿನಾಂಕ: 30.07.2026

ಪ್ರಸ್ತಾವನೆ:

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ಉಪವಿಭಾಗ, ಉಪ

ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಸಂಚಾರ ಉತ್ತರ ವಿಭಾಗದ, ಚಿಕ್ಕಬಾಣಾವಾರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ-48ರ ರಸ್ತೆಯನ್ನು ಇತ್ತೀಚೆಗೆ ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ ಮಾದನಾಯಕನಹಳ್ಳಿ ಕಾ&ಸು ಪೊಲೀಸ್ ಠಾಣಾ ವ್ಯಾಪ್ತಿಯನ್ನು, ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಸಂಚಾರ ನಿರ್ವಹಣಾ ದೃಷ್ಟಿಯಿಂದ ವಿಲೀನಗೊಳಿಸಿ, ಅಧಿಸೂಚನೆ ಹೊರಡಿಸಲಾಗಿರುತ್ತದೆ. ಮಾದನಾಯಕನಹಳ್ಳಿ ಠಾಣಾ ಸರಹದ್ದಿನ ಸುಮಾರು 21 ಚ.ಕಿ.ಮೀ ವ್ಯಾಪ್ತಿಯ 16 ಹಳ್ಳಿಗಳು ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಸೇರ್ಪಡೆಯಾಗಿರುವುದರಿಂದ, ರಾಷ್ಟ್ರೀಯ ಹೆದ್ದಾರಿ-48 ರ ಪಾಲ್ರೇ–ಜಿ ಟೋಲ್ ನಿಂದ ಅರಿಶಿನಕುಂಟೆ ಟೋಲ್ ವರೆಗಿನ ಮುಖ್ಯ ರಸ್ತೆ ಮತ್ತು ಸರ್ವೀಸ್ ರಸ್ತೆಯಲ್ಲಿ ಸಂಚಾರ ನಿರ್ವಹಣೆ ಮಾಡಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿರುತ್ತದೆ.

ರಾಷ್ಟ್ರೀಯ ಹೆದ್ದಾರಿ-48 ರ ಸರ್ವೀಸ್ ರಸ್ತೆಯಲ್ಲಿ, ಟಿಸಿಐ ಅಂಡರ್ ಪಾಸ್ ನಿಂದ ಮಾದವರ (ಬಿಐಇಸಿ ಮುಖ್ಯ ದ್ವಾರದ) ವರೆಗೆ ಹಾಗೂ ಮಾದವರ (ಬಿ.ಐ.ಇ.ಸಿ ಅಂಡರ್ ಪಾಸ್) ದಿಂದ ಟಿಸಿಐ ಅಂಡರ್ ಪಾಸ್ ವರೆಗೆ ಸುಮಾರು 730 ಮೀ ಉದ್ದವಿದ್ದು, ದ್ವಿಮುಖ ಸಂಚಾರದ ಕಿರಿದಾಗಿರುವ ರಸ್ತೆಯಾಗಿರುತ್ತದೆ. ಸರ್ವೀಸ್ ರಸ್ತೆಗೆ ಹೊಂದಿಕೊಂಡಂತೆ ಪೆಟ್ರೋಲ್ ಬಂಕ್, ನಾಡ್ಸೀರ್ ಕಾಲೇಜ್, ಟಿಸಿಐ ಟ್ರಾನ್ಸ್ ಪೋರ್ಟ್ ಕಂಪನಿ, ಲಾರಿ ಸ್ಟಾ್ಯಂಡ್ ಗಳು, ದೊಡ್ಡ ಗೋದಾಮುಗಳು ,ಅಂಗಡಿ ಮುಂಗಟ್ಟುಗಳು ಹಾಗೂ ಮಾದವರ ಮೆಟ್ರೋ ನಿಲ್ದಾಣ ವಿದ್ದು ಸದಾ ಸಂಚಾರ ದಟ್ಟಣೆಯ ರಸ್ತೆಯಾಗಿರುತ್ತದೆ.

ಸದರಿ ರಸ್ತೆಯ ಮುಖಾಂತರ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ವಾಹನಗಳು ತುಮಕೂರು ನಗರದಿಂದ ಬೆಂಗಳೂರು ನಗರಕ್ಕೆ ಸಂಚರಿಸುತ್ತಿರುತ್ತವೆ. ಸರ್ವಿಸ್ ರಸ್ತೆಯ ಅಕ್ಕ-ಪಕ್ಕದ ಗೋದಾಮುಗಳಿಂದ ಬರುವ ಭಾರಿ ಗಾತ್ರದ ವಾಹನಗಳು ಎರಡು ದಿಕ್ಕಿನಿಂದನಿಂದಲೂ ಸಂಚರಿಸುವುದರಿಂದ, ವಾಹನಗಳನ್ನು ಎಲ್ಲೆಂದರಲ್ಲಿ ಪಾರ್ಕಿಂಗ್ ಮಾಡುವುದರಿಂದ ವಾಹನಗಳ ಸಂಚಾರವು ನಿಧಾನಗತಿಯಲ್ಲಿ ಸಾಗಿ ಸಂಚಾರ ದಟ್ಟಣೆಯುಂಟಾಗಿ ಆಗಿಂದಾಗ್ಗೆ ವಾಹನಗಳ ಸಂಚಾರ ಸ್ಥಗಿತಗೊಂಡು ರಾಷ್ಟ್ರೀಯ ಹೆದ್ದಾರಿ-48 ರಲ್ಲಿ ಹೆಚ್ಚಿನ ಒತ್ತಡ ಉಂಟಾಗುತ್ತಿರುತ್ತದೆ ಹಾಗೂ ವಿವಿಐಪಿ & ವಿಐಪಿ ರವರುಗಳ ಸಂಚಾರದ ಸಮಯದಲ್ಲಿ ಹಾಗೂ ಸಾರ್ವಜನಿಕರ ವಾಹನಗಳ ಸುಗಮ ಮತ್ತು ಸುರಕ್ಷಿತ ಸಂಚಾರದ ಹಿತದೃಷ್ಟಿಯಿಂದ

1. ರಾಷ್ಟ್ರೀಯ ಹೆದ್ದಾರಿ-48 ರ ತುಮಕೂರು ಕಡೆಯಿಂದ ಬೆಂಗಳೂರು ನಗರದ ಕಡೆಯ ಸರ್ವಿಸ್ ರಸ್ತೆಯ ಟಿಸಿಐ ಅಂಡರ್ ಪಾಸ್‌ನಿಂದ ಮಾದಾವರ (ಬಿಐಇಸಿ ಮುಖ್ಯದ್ವಾರದ)ವರೆಗೆ, ಟಿಸಿಐ ಅಂಡರ್ ಪಾಸ್ ನಿಂದ ಮಾದಾವರ (ಬಿಐಇಸಿ ಮುಖ್ಯದ್ವಾರದ) ಕಡೆಗೆ ಬರುವ ವಾಹನಗಳಿಗೆ ಮಾತ್ರ ಸಂಚಾರಕ್ಕೆ ಅವಕಾಶ ನೀಡಿ, ಮಾದವರ (ಬಿಐಇಸಿ ಮುಖ್ಯದ್ವಾರದ) ದಿಂದ ಟಿಸಿಐ ಅಂಡರ್‌ಪಾಸ್ ಕಡೆಗೆ ಹೋಗುವ ವಾಹನಗಳ ಸಂಚಾರ ನಿರ್ಭಂಧಿಸಿ, ಏಕಮುಖ ಸಂಚಾರ ರಸ್ತೆಯನ್ನಾಗಿ ಮಾಡಿ ಸದರಿ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹಗಳ ನಿಲುಗಡೆ ನಿಷೇಧಿಸಿ ಅಧಿಸೂಚನೆ ಹೊರಡಿಸುವ ಅವಶ್ಯಕತೆ ಇರುವುದಾಗಿ.
2. ಹಾಗೂ ರಾಷ್ಟ್ರೀಯ ಹೆದ್ದಾರಿ-48 ರ ಬೆಂಗಳೂರು ನಗರದಿಂದ ತುಮಕೂರು ಕಡೆಗೆ ಸಂಚರಿಸುವ ಸರ್ವೀಸ್ ರಸ್ತೆಯಲ್ಲಿ ಮಾದವರ (ಬಿಐಇಸಿ ಅಂಡರ್ ಪಾಸ್) ದಿಂದ ಟಿಸಿಐ ಅಂಡರ್ ಪಾಸ್ ಕಡೆಗೆ ಬರುವ ವಾಹನಗಳ ಸಂಚಾರಕ್ಕೆ ಅವಕಾಶ ನೀಡಿ, ಟಿಸಿಐ ಅಂಡರ್ ಪಾಸ್ ನಿಂದ ಮಾದಾವರ (ಬಿಐಇಸಿ ಅಂಡರ್ ಪಾಸ್) ವರೆಗೆ ವಾಹನಗಳ ಸಂಚಾರ

ನಿರ್ಭಂಧಿಸಿ, ಏಕಮುಖ ಸಂಚಾರ ರಸ್ತೆಯನ್ನಾಗಿ ಮಾಡಿ ಸದರಿ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹಗಳ ನಿಲುಗಡೆ ನಿಷೇಧಿಸುವ ಅವಶ್ಯಕತೆ ಇರುವುದಾಗಿ ತಿಳಿಸುತ್ತಾ.

ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ-48 ರ ಸರ್ವೀಸ್ ರಸ್ತೆಯಲ್ಲಿ ಟಿಸಿಐ ಅಂಡರ್ ಪಾಸ್ ನಿಂದ ಮಾದವರ (ಬಿಐಇಸಿ ಮುಖ್ಯ ದ್ವಾರದ) ವರೆಗೆ (ಬೆಂಗಳೂರು ನಗರದ ಕಡೆಗೆ) ಹಾಗೂ ಮಾದವರ (ಬಿಐಇಸಿ ಅಂಡರ್ ಪಾಸ್) ದಿಂದ ಟಿಸಿಐ ಅಂಡರ್ ಪಾಸ್ ವರೆಗೆ (ಸರ್ವೀಸ್ ರಸ್ತೆ ಎರಡು ಮಾರ್ಗದ) ವಾಹನಗಳ ಸಂಚಾರವನ್ನು ನಿರ್ಭಂದಿಸಿ, ಏಕಮುಖ ಸಂಚಾರ ರಸ್ತೆಯನ್ನಾಗಿಸಿ ಹಾಗೂ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇಧಿಸುವ ಅವಶ್ಯಕತೆ ಇರುವುದಾಗಿ, ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ-48 ರ ಸರ್ವೀಸ್ ರಸ್ತೆಯಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, ಟಿಸಿಐ ಅಂಡರ್ ಪಾಸ್ ನಿಂದ ಮಾದವರ (ಬಿಐಇಸಿ ಮುಖ್ಯ ದ್ವಾರದ) ವರೆಗೆ (ಬೆಂಗಳೂರು ನಗರದ ಕಡೆಗೆ) ಹಾಗೂ ಮಾದವರ (ಬಿಐಇಸಿ ಅಂಡರ್ ಪಾಸ್) ದಿಂದ ಟಿಸಿಐ ಅಂಡರ್ ಪಾಸ್ ವರೆಗೆ (ಸರ್ವೀಸ್ ರಸ್ತೆ ಎರಡು ಮಾರ್ಗದ) ವಾಹನಗಳ ಸಂಚಾರವನ್ನು ನಿರ್ಭಂದಿಸಿ, ಏಕಮುಖ ಸಂಚಾರ ರಸ್ತೆಯನ್ನಾಗಿಸಿ ಹಾಗೂ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇಧಿಸಿ ಅಧಿಸೂಚನೆಯನ್ನು ಹೊರಡಿಸುವ ಅವಶ್ಯಕತೆ ಇರುವುದಾಗಿ, ಅಧಿಸೂಚನೆ ಹೊರಡಿಸುವಂತೆ ಕೋರಿ ಉಲ್ಲೇಖಿತ ಪತ್ರಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ-48 ರ ಸರ್ವೀಸ್ ರಸ್ತೆಯಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, ಟಿಸಿಐ ಅಂಡರ್ ಪಾಸ್ ನಿಂದ ಮಾದವರ (ಬಿಐಇಸಿ ಮುಖ್ಯ ದ್ವಾರದ) ವರೆಗೆ (ಬೆಂಗಳೂರು ನಗರದ ಕಡೆಗೆ) ಹಾಗೂ ಮಾದವರ (ಬಿಐಇಸಿ ಅಂಡರ್ ಪಾಸ್) ದಿಂದ ಟಿಸಿಐ ಅಂಡರ್ ಪಾಸ್ ವರೆಗೆ (ಸರ್ವೀಸ್ ರಸ್ತೆ ಎರಡು ಮಾರ್ಗದ) ವಾಹನಗಳ ಸಂಚಾರವನ್ನು ನಿರ್ಭಂದಿಸಿ, ಏಕಮುಖ ಸಂಚಾರ ರಸ್ತೆಯನ್ನಾಗಿಸಿ ಹಾಗೂ ರಸ್ತೆಯ ಎರಡು ಬದಿಯಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿಷೇಧಿಸಿ ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

ಆದೇಶ ಸಂಖ್ಯೆ: 20/ಅಧಿಸೂಚನೆ/ಜಂ.ಪೊ.ಆ (ಸಂ)/2026, ದಿನಾಂಕ:05.08.2026

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್ ಕುಮಾರ್ ಸಿಂಗ್. ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ** ಆದನಾನು, ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ-48 ರ ಸರ್ವೀಸ್ ರಸ್ತೆಯಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, ಟಿಸಿಐ ಅಂಡರ್ ಪಾಸ್ ನಿಂದ ಮಾದವರ (ಬಿಐಇಸಿ ಮುಖ್ಯ ದ್ವಾರದ) ವರೆಗೆ (ಬೆಂಗಳೂರು ನಗರದ ಕಡೆಗೆ) ಹಾಗೂ ಮಾದವರ (ಬಿಐಇಸಿ ಅಂಡರ್ ಪಾಸ್) ದಿಂದ ಟಿಸಿಐ ಅಂಡರ್ ಪಾಸ್ ವರೆಗೆ (ಸರ್ವೀಸ್ ರಸ್ತೆ ಎರಡು ಮಾರ್ಗದ) ವಾಹನಗಳ ಸಂಚಾರವನ್ನು ನಿರ್ಭಂದಿಸಿ, ಏಕಮುಖ ಸಂಚಾರ ರಸ್ತೆಯನ್ನಾಗಿಸಿ ಹಾಗೂ ರಸ್ತೆಯ ಎರಡು ಬದಿಯಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆ ನಿಷೇಧಿಸಿ ಪರ್ಯಾಯ ಮಾರ್ಗ ಸೂಚಿಸಿ ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

ಏಕಮುಖ ಸಂಚಾರ ರಸ್ತೆಯನ್ನಾಗಿ ಅಧಿಸೂಚನೆ ಹೊರಡಿಸಿರುವ ರಸ್ತೆಗಳ ವಿವರ

ಸಂಚಾರ ಠಾಣೆ:ಚಿಕ್ಕಬಾಣಾವರ			
ರಸ್ತೆ	**ಇಂದ**	**ವರೆಗೆ**	**ದಿಕ್ಕು**
ರಾಷ್ಟ್ರೀಯ ಹೆದ್ದಾರಿ-48ರ ತುಮಕೂರು ನಿಂದ ಬೆಂಗಳೂರು ನಗರದ ಕಡೆಯ ಸರ್ವೀಸ್ ರಸ್ತೆಯಲ್ಲಿ	ಟಿಸಿಐ ಅಂಡರ್ ಪಾಸ್ ನಿಂದ	ಮಾದವರ (ಬಿಐಇಸಿ ಮುಖ್ಯ ದ್ವಾರದ) ವರೆಗೆ	**ಪೂರ್ವದ ಕಡೆಗೆ**
ಅಕ್ಷಾಂಶ:13.058871,13.057045.		ರೇಖಾಂಶ:77.466711,77473772.	
ರಾಷ್ಟ್ರೀಯ ಹೆದ್ದಾರಿ-48ರ ಬೆಂಗಳೂರು ನಗರ ದಿಂದ ತುಮಕೂರು ಕಡೆಯ ಸರ್ವೀಸ್ ರಸ್ತೆಯಲ್ಲಿ	ಮಾದವರ (ಬಿಐಇಸಿ ಅಂಡರ್ ಪಾಸ್) ದಿಂದ	ಟಿಸಿಐ ಅಂಡರ್ ಪಾಸ್ ವರೆಗೆ	**ಪಶ್ಚಿಮದ ಕಡೆಗೆ**
ಅಕ್ಷಾಂಶ:13.056585,13.0585582		ರೇಖಾಂಶ:77.473606,77.466638	

ನಿರ್ಬಂಧಿಸಿರುವ ರಸ್ತೆಗೆ ಪರ್ಯಾಯ ಮಾರ್ಗ:

- ಕುದುರುಗೆರೆಯಿಂದ ಬರುವ ವಾಹನಗಳು ಕುದುರುಗೆರೆ ಕ್ರಾಸ್ ಬಳಿ ಎಡ ತಿರುವು ಪಡೆದು ರಾಷ್ಟ್ರೀಯ ಹೆದ್ದಾರಿ 48 ರ ಸರ್ವಿಸ್ ರಸ್ತೆಯ ಮೂಲಕ ಸಾಗಿ ನೈಸ್ ರಸ್ತೆಯ ಕಡೆಗೆ ಮತ್ತು ಅಂಚೆಪಾಳ್ಯ ಟೋಲ್ ಮೂಲಕ ಬೆಂಗಳೂರು ನಗರದ ಕಡೆಗೆ ಹಾಗೂ ಮಾದವರ (ಬಿಐಇಸಿ) ಅಂಡರ್ ಪಾಸ್ ಬಳಿ ಬಲ ತಿರುವು ಪಡೆದು ತುಮಕೂರು ಮಾರ್ಗವಾಗಿ ಸಂಚರಿಸಬಹುದಾಗಿರುತ್ತದೆ.

- ಮಾದವರ ದಿಂದ ಬರುವ ಸಾರ್ವಜನಿಕರು ರಾಷ್ಟ್ರೀಯ ಹೆದ್ದಾರಿ-48 ರ ಮಾದವರ ಅಂಡರ್ ಪಾಸ್ (ಬಿಐಇಸಿ ಅಂಡರ್ ಪಾಸ್) ಜಂಕ್ಷನ್ ನಿಂದ ಬಲ ತಿರುವು ಪಡೆದು ರಾಷ್ಟ್ರೀಯ ಹೆದ್ದಾರಿ 48 ರ ಸರ್ವಿಸ್ ರಸ್ತೆಯ ಮೂಲಕ ಸಾಗಿ ನೈಸ್ ರಸ್ತೆಯ ಕಡೆಗೆ ಮತ್ತು ಅಂಚೆಪಾಳ್ಯ ಟೋಲ್ ಮೂಲಕ ಬೆಂಗಳೂರು ನಗರದ ಕಡೆಗೆ ತಲುಪಬಹುದಾಗಿರುತ್ತದೆ.

- ಹಾಗೂ ಮಾದವರ ದಿಂದ ಇತರೆ ರಸ್ತೆಗಳಿಂದ ಬರುವ ಸಾರ್ವಜನಿಕರು ಟಿಸಿಐ ಅಂಡರ್ ಪಾಸ್‌ನಲ್ಲಿ ಬಲ ತಿರುವು ಪಡೆದು, ರಾಷ್ಟ್ರೀಯ ಹೆದ್ದಾರಿ 48 ರ ಸರ್ವೀಸ್ ರಸ್ತೆಯ ಮೂಲಕ ಸಾಗಿ ಬಿಐಇಸಿ - ನೈಸ್ ರಸ್ತೆಯ ಕಡೆಗೆ ಮತ್ತು ಅಂಚೆಪಾಳ್ಯ ಟೋಲ್ ಮೂಲಕ ಬೆಂಗಳೂರು ನಗರದ ಕಡೆಗೆ ತಲುಪಬಹುದಾಗಿರುತ್ತದೆ.

ವಾಹನಗಳ ನಿಲುಗಡೆ ನಿಷೇಧಿಸಿರುವ (No-Parking) ರಸ್ತೆಯ ವಿವರ.

ಸಂಚಾರ ಠಾಣೆ:ಚಿಕ್ಕಬಾಣಾವರ			
ರಸ್ತೆ	ಇಂದ	ವರೆಗೆ	ದಿಕ್ಕು
ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ-48ರ ಸರ್ವೀಸ್ ರಸ್ತೆಯಲ್ಲಿ	ಟಿಸಿಐ ಅಂಡರ್ ಪಾಸ್ ನಿಂದ	ಮಾದವರ (ಬಿಐಇಸಿ ಮುಖ್ಯ ದ್ವಾರದ) ವರೆಗೆ	**ಸರ್ವೀಸ್ ರಸ್ತೆಯ ಎರಡೂ ಮಾರ್ಗದಲ್ಲಿ**
ಅಕ್ಷಾಂಶ:13.058871,13.056585.		ರೇಖಾಂಶ:77.466711,77.473606.	

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ:05.08.2026 ರಿಂದ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ)

(**ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್**)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

PR-1067

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು
ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್ , ಐ.ಪಿ.ಎಸ್
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ವಿಷಯ: ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ನಾಗಪುರ ವಾರ್ಡ್ ನ, 02ನೇ ಮತ್ತು 03ನೇ ಮುಖ್ಯ ರಸ್ತೆಗಳನ್ನು ಏಕಮುಖ ಹಾಗೂ ವಾಹನಗಳ ನಿಲುಗಡೆ ನಿಷೇಧಿಸಿ, ನೋ-ಪಾರ್ಕಿಂಗ್ ರಸ್ತೆಗಳನ್ನಾಗಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ:
1. ಪೊಲೀಸ್ ಇನ್ಸ್‌ಪೆಕ್ಟರ್ ರಾಜಾಜಿನಗರ ಸಂಚಾರ ಪೊಲೀಸ್ ಠಾಣೆ ರವರ ಸಂ.93/ಸಿಸಿ/ರಾಸಂಪೊಠಾ/2026 ದಿನಾಂಕ: 28.05.2026.
2. ಎಸಿಪಿ, ಸಂಚಾರ ಉತ್ತರ ಉಪ-ವಿಭಾಗ,ಬೆಂಗಳೂರು ನಗರ ರವರ ಪತ್ರ ಸಂ.80/ಸಿಸಿ/ಎಸಿಪಿ/ಸಂ.ಉ.ಉ.ವಿ/2026 ದಿನಾಂಕ: 30.05.2026.
3. ಉಪಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ ರವರ ಸಂ: 08/Notification/ಡಿಸಿಪಿ/ಸಂಉ/2026. ದಿ: 15.07.2026.
4. ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಷರಾ ದಿ:30.07.2026.

ಪ್ರಸ್ತಾವನೆ:

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ರಾಜಾಜಿನಗರ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ಉಪವಿಭಾಗ, ಉಪ ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಸಂಚಾರ ಉತ್ತರ ವಿಭಾಗದ ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ನಾಗಪುರ ವಾರ್ಡ್ ನಂ-51 ರ 02ನೇ & 03ನೇ ಮುಖ್ಯರಸ್ತೆಗಳು ಕಿರಿದಾಗಿರುವ ದ್ವಿಮುಖ ಸಂಚಾರದ ರಸ್ತೆಗಳಾಗಿರುತ್ತವೆ, ಸದರಿ ರಸ್ತೆಗಳಲ್ಲಿ ವಾಹನಗಳ ಅನಧಿಕೃತ ಪಾರ್ಕಿಂಗ್‌ನಿಂದಾಗಿ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವುದಾಗಿ. ಸ್ಥಳೀಯರು ರ 02ನೇ & 03ನೇ ಮುಖ್ಯ ರಸ್ತೆಗಳನ್ನು ಏಕಮುಖ ಹಾಗೂ ನೋ-ಪಾರ್ಕಿಂಗ್ ಸ್ಥಳಗಳನ್ನಾಗಿ ಮಾರ್ಪಾಡು ಮಾಡಿ ಅಧಿಸೂಚನೆ ಹೊರಡಿಸಲು ಕೋರಿ ಮನವಿ ಮಾಡಿರುತ್ತಾರೆ.

ಸ್ಥಳೀಯವರ ಮನವಿ ಮೇರೆಗೆ, ಸ್ಥಳ ಪರಿಶೀಲನೆ ಮಾಡಿ, ರಾಜಾಜಿನಗರ ನಾಗಪುರ ವಾರ್ಡ್ ನಂ-51 ರ 02ನೇ & 03ನೇ ಮುಖ್ಯ ರಸ್ತೆ ಹಾಗೂ 10ನೇ ಅಡ್ಡರಸ್ತೆಗಳಲ್ಲಿ, ರಾಜಾಜಿನಗರ ಮೆಟ್ರೋ ನಿಲ್ದಾಣಕ್ಕೆ ಹೋಗುವವರು ತಮ್ಮ ದ್ವಿಚಕ್ರ ವಾಹನಗಳನ್ನು ಸದರಿ ರಸ್ತೆಗಳಲ್ಲಿ ನಿಲುಗಡೆ ಮಾಡಿ ಹೋಗುತ್ತಿರುವುದರಿಂದ, 02ನೇ & 03ನೇ ಮುಖ್ಯರಸ್ತೆಗಳಲ್ಲಿ ದ್ವಿಮುಖ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, 02ನೇ ಮುಖ್ಯರಸ್ತೆಯನ್ನು ದಕ್ಷಿಣದಿಂದ (ಮೋದಿ ಆಸ್ಪತ್ರೆ ರಸ್ತೆಯಿಂದ) ಉತ್ತರಕ್ಕೆ (10ನೇ ಅಡ್ಡ ರಸ್ತೆಯವರೆಗೆ) ಹಾಗೂ 03ನೇ ಮುಖ್ಯ ರಸ್ತೆಯನ್ನು ಉತ್ತರದಿಂದ (10ನೇ ಅಡ್ಡ ರಸ್ತೆಯಿಂದ) ದಕ್ಷಿಣಕ್ಕೆ (ಮೋದಿ ಆಸ್ಪತ್ರೆ ರಸ್ತೆಯವರೆಗೆ) 180 ಮೀ ಎರಡು ರಸ್ತೆಗಳನ್ನು ಏಕಮುಖ ಸಂಚಾರ ರಸ್ತೆಗಳನ್ನಾಗಿ, 02ನೇ ಮುಖ್ಯ ರಸ್ತೆಯಲ್ಲಿ, ಮೋದಿ ಆಸ್ಪತ್ರೆ ರಸ್ತೆಯಿಂದ 10ನೇ 'ಎ' ಕ್ರಾಸ್ ವರೆಗೆ(ಪೂರ್ವಕ್ಕೆ) ಹಾಗೂ 03ನೇ ಮುಖ್ಯ ರಸ್ತೆಯನ್ನು 10ನೇ ಅಡ್ಡ ರಸ್ತೆಯಿಂದ ಮೋದಿ ಆಸ್ಪತ್ರೆ ರಸ್ತೆಯವರೆಗೆ (ಪೂರ್ವಕ್ಕೆ) ಮತ್ತು 10ನೇ ಅಡ್ಡ ರಸ್ತೆಯನ್ನು ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ 03ನೇ ಮುಖ್ಯ ರಸ್ತೆಯವರೆಗೆ (ಉತ್ತರ & ದಕ್ಷಿಣಕ್ಕೆ) ಎರಡೂ ಬದಿಯಲ್ಲು ನೋ-ಪಾರ್ಕಿಂಗ್ ರಸ್ತೆಗಳನ್ನಾಗಿ ಅಧಿಸೂಚನೆ ಹೊರಡಿಸುವ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ.

ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ, ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ನಾಗಪುರ ವಾರ್ಡ್ ನಂ-51ರ 02ನೇ ಮುಖ್ಯರಸ್ತೆಯನ್ನು ದಕ್ಷಿಣದಿಂದ (ಮೋದಿ ಆಸ್ಪತ್ರೆ ರಸ್ತೆಯಿಂದ) ಉತ್ತರಕ್ಕೆ (10ನೇ ಅಡ್ಡ ರಸ್ತೆಯವರೆಗೆ) ಹಾಗೂ 03ನೇ ಮುಖ್ಯ ರಸ್ತೆಯನ್ನು ಉತ್ತರದಿಂದ (10ನೇ ಅಡ್ಡ ರಸ್ತೆಯಿಂದ) ದಕ್ಷಿಣಕ್ಕೆ (ಮೋದಿ ಆಸ್ಪತ್ರೆ ರಸ್ತೆಯವರೆಗೆ) 180 ಮೀ ಎರಡು ರಸ್ತೆಗಳನ್ನು ಏಕಮುಖ ಸಂಚಾರ ರಸ್ತೆಗಳನ್ನಾಗಿಸಿ, 02ನೇ ಮುಖ್ಯ ರಸ್ತೆಯಲ್ಲಿ, ಮೋದಿ ಆಸ್ಪತ್ರೆ ರಸ್ತೆಯಿಂದ 10ನೇ 'ಎ' ಕ್ರಾಸ್ ವರೆಗೆ(ಪೂರ್ವಕ್ಕೆ) ಹಾಗೂ 03ನೇ ಮುಖ್ಯ ರಸ್ತೆಯನ್ನು 10ನೇ ಅಡ್ಡ ರಸ್ತೆಯಿಂದ ಮೋದಿ ಆಸ್ಪತ್ರೆ ರಸ್ತೆಯವರೆಗೆ (ಪೂರ್ವಕ್ಕೆ) ಮತ್ತು 10ನೇ ಅಡ್ಡ ರಸ್ತೆಯನ್ನು ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ 03ನೇ ಮುಖ್ಯ ರಸ್ತೆಯವರೆಗೆ (ಉತ್ತರ & ದಕ್ಷಿಣಕ್ಕೆ) ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇದಿಸಿ, ನೋ-ಪಾರ್ಕಿಂಗ್ ರಸ್ತೆಗಳನ್ನಾಗಿ ಅಧಿಸೂಚನೆಯನ್ನು ಹೊರಡಿಸಲು ಕೋರಿ, ಉಲ್ಲೇಖಿತ ಪತ್ರಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ, ಸುಗಮ ಸಂಚಾರದ ಹಿತದೃಷ್ಟಿಯಿಂದ, ನಾಗಪುರ ವಾರ್ಡ್ ನಂ-51ರ 02ನೇ ಮುಖ್ಯರಸ್ತೆಯನ್ನು ದಕ್ಷಿಣದಿಂದ (ಮೋದಿ ಆಸ್ಪತ್ರೆ ರಸ್ತೆಯಿಂದ) ಉತ್ತರಕ್ಕೆ (10ನೇ ಅಡ್ಡ ರಸ್ತೆಯವರೆಗೆ) ಹಾಗೂ 03ನೇ ಮುಖ್ಯ ರಸ್ತೆಯನ್ನು ಉತ್ತರದಿಂದ (10ನೇ ಅಡ್ಡ ರಸ್ತೆಯಿಂದ) ದಕ್ಷಿಣಕ್ಕೆ (ಮೋದಿ ಆಸ್ಪತ್ರೆ ರಸ್ತೆಯವರೆಗೆ) 180 ಮೀ ಎರಡು ರಸ್ತೆಗಳನ್ನು ಏಕಮುಖ ಸಂಚಾರ ರಸ್ತೆಗಳನ್ನಾಗಿಸಿ, 02ನೇ ಮುಖ್ಯ ರಸ್ತೆಯಲ್ಲಿ, ಮೋದಿ ಆಸ್ಪತ್ರೆ ರಸ್ತೆಯಿಂದ 10ನೇ 'ಎ' ಕ್ರಾಸ್ ವರೆಗೆ(ಪೂರ್ವಕ್ಕೆ) ಹಾಗೂ 03ನೇ ಮುಖ್ಯ ರಸ್ತೆಯನ್ನು 10ನೇ ಅಡ್ಡ ರಸ್ತೆಯಿಂದ ಮೋದಿ ಆಸ್ಪತ್ರೆ ರಸ್ತೆಯವರೆಗೆ (ಪೂರ್ವಕ್ಕೆ) ಮತ್ತು 10ನೇ ಅಡ್ಡ ರಸ್ತೆಯನ್ನು ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ 03ನೇ ಮುಖ್ಯ ರಸ್ತೆಯವರೆಗೆ (ಉತ್ತರ & ದಕ್ಷಿಣಕ್ಕೆ) ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇದಿಸಿ, ನೋ-ಪಾರ್ಕಿಂಗ್ ರಸ್ತೆಗಳನ್ನಾಗಿ ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿ, ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

ಆದೇಶ ಸಂಖ್ಯೆ:21/ಅಧಿಸೂಚನೆ/ಜಂ.ಪೊ.ಆ (ಸಂ)/2026, ದಿ: 05.08.2026.

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್**

ಕುಮಾರ್ ಸಿಂಗ್. ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಆದನಾನು, ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ ರಾಜಾಜಿನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ, ಸುಗಮ ಸಂಚಾರದ ಹಿತದೃಷ್ಟಿಯಿಂದ, ನಾಗಪುರ ವಾರ್ಡ್ ನಂ-51ರ 02ನೇ ಮುಖ್ಯರಸ್ತೆಯನ್ನು ದಕ್ಷಿಣದಿಂದ (ಮೋದಿ ಆಸ್ಪತ್ರೆ ರಸ್ತೆಯಿಂದ) ಉತ್ತರಕ್ಕೆ (10ನೇ ಅಡ್ಡ ರಸ್ತೆಯವರೆಗೆ) ಹಾಗೂ 03ನೇ ಮುಖ್ಯ ರಸ್ತೆಯನ್ನು ಉತ್ತರದಿಂದ (10ನೇ ಅಡ್ಡ ರಸ್ತೆಯಿಂದ) ದಕ್ಷಿಣಕ್ಕೆ (ಮೋದಿ ಆಸ್ಪತ್ರೆ ರಸ್ತೆಯವರೆಗೆ) 180 ಮೀ ಎರಡು ರಸ್ತೆಗಳನ್ನು ಏಕಮುಖ ಸಂಚಾರ ರಸ್ತೆಗಳನ್ನಾಗಿಸಿ, 02ನೇ ಮುಖ್ಯ ರಸ್ತೆಯಲ್ಲಿ, ಮೋದಿ ಆಸ್ಪತ್ರೆ ರಸ್ತೆಯಿಂದ 10ನೇ 'ಎ' ಕ್ರಾಸ್ ವರೆಗೆ(ಪೂರ್ವಕ್ಕೆ) ಹಾಗೂ 03ನೇ ಮುಖ್ಯ ರಸ್ತೆಯನ್ನು 10ನೇ ಅಡ್ಡ ರಸ್ತೆಯಿಂದ ಮೋದಿ ಆಸ್ಪತ್ರೆ ರಸ್ತೆಯವರೆಗೆ (ಪೂರ್ವಕ್ಕೆ) ಮತ್ತು 10ನೇ ಅಡ್ಡ ರಸ್ತೆಯನ್ನು ವೆಸ್ಟ್ ಆಫ್ ಕಾರ್ಡ್ ರಸ್ತೆಯಿಂದ 03ನೇ ಮುಖ್ಯ ರಸ್ತೆಯವರೆಗೆ (ಉತ್ತರ & ದಕ್ಷಿಣಕ್ಕೆ) ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇದಿಸಿ, ನೋ-ಪಾರ್ಕಿಂಗ್ ರಸ್ತೆಗಳನ್ನಾಗಿ ಪರ್ಯಾಯ ಮಾರ್ಗ ಉಪಯೋಗಿಸಲು ಸೂಚಿಸಿ, ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

ಏಕಮುಖ ಸಂಚಾರವನ್ನಾಗಿಸಿರುವ ರಸ್ತೆಗಳ ವಿವರ.

ಕ್ರಸಂ	ರಸ್ತೆಯ ಹೆಸರು	ಇಂದ	ವರೆಗೆ	ದಿಕ್ಕು
01	02ನೇ ಮುಖ್ಯ ರಸ್ತೆಯನ್ನು	ದಕ್ಷಿಣ ದಿಂದ (ಮೋದಿ ಆಸ್ಪತ್ರೆ ರಸ್ತೆ)	ಉತ್ತರಕ್ಕೆ (10ನೇ ಅಡ್ಡ ರಸ್ತೆಯವರೆಗೆ)	ದಕ್ಷಿಣ ದಿಂದ ಉತ್ತರಕ್ಕೆ 180ಮೀ
ಅಕ್ಷಾಂಶ: 12.997688, 12.999179			ರೇಖಾಂಶ: 77.548841, 77.549256	
02	03ನೇ ಮುಖ್ಯ ರಸ್ತೆಯನ್ನು	ಉತ್ತರದಿಂದ(10ನೇ ಅಡ್ಡ ರಸ್ತೆಯಿಂದ)	ದಕ್ಷಿಣಕ್ಕೆ (ಮೋದಿ ಆಸ್ಪತ್ರೆ ರಸ್ತೆಯವರೆಗೆ)	ಉತ್ತರ ದಿಂದ ದಕ್ಷಿಣಕ್ಕೆ 180 ಮೀ
ಅಕ್ಷಾಂಶ: 12.999109, 12.997646			ರೇಖಾಂಶ: 77.548543, 77.548969	

ನಿರ್ಬಂಧಿಸಿರುವ ರಸ್ತೆಗೆ ಪರ್ಯಾಯ ಮಾರ್ಗ:

ಮೋದಿ ರಸ್ತೆ ಕಡೆಗೆ ಸಂಚರಿಸುವವರು 2ನೇ ಮುಖ್ಯ ರಸ್ತೆಯ ಮೂಲಕ ಸಂಚರಿಸಬಹುದಾಗಿರುತ್ತದೆ ಹಾಗೂ ರಾಜಾಜಿನಗರ ಮೆಟ್ರೋ ಕಡೆಗೆ ಸಂಚರಿಸುವವರು 3ನೇ ಮುಖ್ಯ ರಸ್ತೆಯ ಮೂಲಕ ಸಂಚರಿಸಬಹುದಾಗಿರುತ್ತದೆ.

ನೋಪಾರ್ಕಿಂಗ್ ರಸ್ತೆಗಳನ್ನಾಗಿಸಿರುವ ರಸ್ತೆಗಳ ವಿವರ.

ಕ್ರಸಂ	ರಸ್ತೆಯ ಹೆಸರು	ಇಂದ	ವರೆಗೆ	ದಿಕ್ಕು
01	02ನೇ ಮುಖ್ಯ ರಸ್ತೆಯನ್ನು	ದಕ್ಷಿಣ ದಿಂದ (ಮೋದಿ ಆಸ್ಪತ್ರೆ ರಸ್ತೆಯಿಂದ)	ಉತ್ತರಕ್ಕೆ (10ನೇ ಅಡ್ಡ ರಸ್ತೆಯವರೆಗೆ)	ಪೂರ್ವಕ್ಕೆ
ಅಕ್ಷಾಂಶ: 12.997688, 12.999179			ರೇಖಾಂಶ: 77.548841, 77.549256	
02	03ನೇ ಮುಖ್ಯ ರಸ್ತೆಯನ್ನು	ಉತ್ತರದಿಂದ(10ನೇ ಅಡ್ಡ ರಸ್ತೆಯಿಂದ)	ದಕ್ಷಿಣಕ್ಕೆ (ಮೋದಿ ಆಸ್ಪತ್ರೆ ರಸ್ತೆಯವರೆಗೆ)	ಪೂರ್ವಕ್ಕೆ

ಅಕ್ಷಾಂಶ: 12.999109, 12.997646			ರೇಖಾಂಶ: 77.548543, 77.548969	
03	ವೆಸ್ಟ್ ಆಫ್ ಕಾರ್ಡ್ ರಸ್ತೆ	10ನೇ ಅಡ್ಡರಸ್ತೆಯಿಂದ	3ನೇ ಮುಖ್ಯ ರಸ್ತೆ ವರೆಗೆ	ರಸ್ತೆಯ ಎರಡೂ ಬದಿಯಲ್ಲಿ (ಉತ್ತರ&ದಕ್ಷಿಣ)
ಅಕ್ಷಾಂಶ:12.999441,12.999109.			ರೇಖಾಂಶ:77.549767,77.548543.	

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ: 05.08.2026 ರಿಂದ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

(**ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್**)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

PR-1068

ಪೊಲೀಸ್ ಆಯುಕ್ತರು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಂಗಳೂರು ನಗರ ರವರ ನಡವಳಿಗಳು

ಉಪಸ್ಥಿತರು: ಶ್ರೀ ಸೀಮಾಂತ್ ಕುಮಾರ್ ಸಿಂಗ್ , ಐ.ಪಿ.ಎಸ್
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ವಿಷಯ: ಯಲಹಂಕ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಜಕ್ಕೂರು ರಸ್ತೆಯ ಯಲಹಂಕ ರೈತರ ಸಂತೆಯಿಂದ HDFC ಸ್ಕೂಲ್ ವರೆಗೆ 1.9 ಕಿ.ಮೀ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇಧಿಸಿ (NO PARKING) ರಸ್ತೆಯನ್ನಾಗಿ ಅಧಿಸೂಚನೆ ಹೊರಡಿಸಿರುವ ಬಗ್ಗೆ.

ಉಲ್ಲೇಖ: 1 ಪೊಲೀಸ್ ಇನ್ಸ್‌ಪೆಕ್ಟರ್ ಯಲಹಂಕ ಸಂಚಾರ ಪೊಲೀಸ್ ಠಾಣೆ ರವರ ಸಂ.202/ಸಿಸಿ/ಯ ಸಂ.ಪಿ.ಎಸ್/2026 ದಿನಾಂಕ: 22.05.2026.
2 ಎಸಿಪಿ, ಸಂಚಾರ ಈಶಾನ್ಯ ಉಪ-ವಿಭಾಗ,ಬೆಂಗಳೂರು ನಗರ ರವರ ಪತ್ರ ಸಂ.ಅಧಿ/ಪ್ರ/04/ಎಸಿಪಿ/ಸಂ.ಈ.ಉ.ವಿ/2026 ದಿನಾಂಕ: 14.07.2026.
3 ಉಪಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ ರವರ ಸಂ: 11/Notification/ಅನುಮತಿ/ಡಿಸಿಪಿ/ಸಂಉ/2026. ದಿ: 17.07.2026
4 ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು ನಗರ ರವರ ಷರಾ ದಿ: 30.07.2026

ಪ್ರಸ್ತಾವನೆ:

ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯ, ಪೊಲೀಸ್ ಇನ್ಸ್‌ಪೆಕ್ಟರ್ ಯಲಹಂಕ ಸಂಚಾರ ಪೊಲೀಸ್ ಠಾಣೆ, ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉತ್ತರ ಉಪವಿಭಾಗ, ಉಪ

ಪೊಲೀಸ್ ಆಯುಕ್ತರು ಸಂಚಾರ ಉತ್ತರ ವಿಭಾಗ, ಬೆಂಗಳೂರು ನಗರ ರವರು ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಸಂಚಾರ ಉತ್ತರ ವಿಭಾಗದ ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ಬಳ್ಳಾರಿ ರಸ್ತೆಯ NH-44 ರ ಸರ್ವೀಸ್ ರಸ್ತೆಗೆ ಹೊಂದಿಕೊಂಡಿರುವ ಯಲಹಂಕ ರೈತರ ಸಂತೆ ರಸ್ತೆಗೆ ಹೊಸದಾಗಿ ವೈಟ್ ಟಾಪಿಂಗ್ ಮಾಡುತ್ತಿದ್ದು, ಸದರಿ ರಸ್ತೆಯೂ ಜಕ್ಕೂರು ತಲುಪಲು ಸಿಗ್ನಲ್ ಮುಕ್ತ ರಸ್ತೆಯಾಗಿದ್ದು, ಪ್ರತಿದಿನ ಸಂತೆಗೆ ಸೊಪ್ಪು, ತರಕಾರಿ,ಹಣ್ಣು ಇತ್ಯಾದಿ ಉತ್ಪನ್ನಗಳನ್ನು ಮಾರಾಟ/ಖರೀದಿ ಮಾಡಲು ಸಾವಿರಾರು ಸಂಖ್ಯೆಯಲ್ಲಿ ರೈತರು ಸಾರ್ವಜನಿಕರು ಬರುತ್ತಿರುತ್ತಾರೆ. ಅಲ್ಲದೇ ಈ ರಸ್ತೆಯಲ್ಲಿ ಪ್ರತಿಷ್ಠಿತ ಅಪಾರ್ಟ್ ಮೆಂಟ್‌ಗಳು , ಬಹುಮಹಡಿ ಕಟ್ಟಡಗಳು, ವಾಣಿಜ್ಯ ಮಳಿಗೆಗಳು ಹೊಸದಾಗಿ ದಿನೇದಿನೇ ಪ್ರಾರಂಭಗೊಳ್ಳುತ್ತಿದ್ದು. ಗಣ್ಯ ವ್ಯಕ್ತಿಗಳು, ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಹಾಗೂ ಶಾಲಾ ಕಾಲೇಜು ವಿಧ್ಯಾರ್ಥಿಗಳು/ಪೋಷಕರು ಗಳ ವಾಹನಗಳ ಸಂಚಾರ ಅಧಿಕವಾಗಿದ್ದು ಸಂಚಾರ ದಟ್ಟಣೆಯಿಂದ ಕೂಡಿರುತ್ತದೆ.

ಸದರಿ ರಸ್ತೆಯಲ್ಲಿ ಪ್ರತಿದಿನ ಬೆಳಗಿನ ಜಾವದಿಂದ ರೈತರ ಸಂತೆಗೆ ಉತ್ಪನ್ನಗಳನ್ನು ಲಘು ಮತ್ತು ಭಾರೀ ವಾಹನಗಳ ಮೂಲಕ ತಂದು ಮಾರಾಟ ಮಳಿಗೆಗಳಿಗೆ ಸಾಗಿಸುವ ವಾಹನಗಳನ್ನು ರಸ್ತೆಯಲ್ಲಿಯೇ ನಿಲ್ಲಿಸುತ್ತಿರುತ್ತಾರೆ ಹಾಗೆಯೇ ಸಂತೆಯಲ್ಲಿ ಖರೀದಿ/ಮಾರಾಟ ಮಾಡಲು ಬರುವ ವ್ಯಾಪಾರಿಗಳು, ರೈತರು ಹಾಗೂ ಸಾರ್ವಜನಿಕರು ಮತ್ತು ಶಾಲಾ ಕಾಲೇಜು ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುತ್ತಿರುತ್ತಾರೆ, ಸಂಚಾರ ದಟ್ಟಣೆಯುಂಟಾಗಿ ಹಿರಿಯ ಅಧಿಕಾರಿಗಳುಶಾಲಾ ಮಕ್ಕಳು ಮ್ತು ಸಾರ್ವಜನಿಕರು ತಮ್ಮ ಕೆಲಸಕ್ಕೆ ತೆರಳಲು ತೊಂದರೆಯಾಗುತ್ತಿರುತ್ತದೆ. ಕಿರಿದಾದ ಜಕ್ಕೂರು ರಸ್ತೆಯ ಎರಡು ಬದಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ, ದಟ್ಟಣೆ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು. ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಬೆಂಗಳೂರು ಬಳ್ಳಾರಿ ರಸ್ತೆಯ NH-44 ರ ಸರ್ವೀಸ್ ರಸ್ತೆಗೆ ಹೊಂದಿಕೊಂಡಿರುವ ಜಕ್ಕೂರು ರಸ್ತೆಯಲ್ಲಿ ಯಲಹಂಕ ರೈತರ ಸಂತೆಯಿಂದ HDFC School ತಿರುವಿನ ವರೆಗೆ 1.9 ಕಿ ಮೀ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇಧ (NO PARKING) ರಸ್ತೆಯನ್ನಾಗಿ ಅಧಿಸೂಚನೆ **ಹೊರಡಿಸುವ ಅವಶ್ಯಕತೆ ಇರುವುದಾಗಿ ಉಲ್ಲೇಖಿತ ಪತ್ರಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.**

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಅವಲೋಕಿಸಿ, ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ಬಳ್ಳಾರಿ ರಸ್ತೆಯ NH-44 ರ ಸರ್ವೀಸ್ ರಸ್ತೆಗೆ ಹೊಂದಿಕೊಂಡಿರುವ ಜಕ್ಕೂರು ರಸ್ತೆಯಲ್ಲಿ ಯಲಹಂಕ ರೈತರ ಸಂತೆಯಿಂದ HDFC School ತಿರುವಿನ ವರೆಗೆ 1.9 ಕಿ ಮೀ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇಧ (NO PARKING) ರಸ್ತೆಯನ್ನಾಗಿ ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವಾಗಿದೆಯೆಂದು ಪರಿಗಣಿಸಲಾಗಿದೆ.

ಆದೇಶ ಸಂಖ್ಯೆ: 22/ಅಧಿಸೂಚನೆ/ಜಂ.ಪೊ.ಆ (ಸಂ)/2026,ದಿ:05.08.2026.

ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸೀಮಾಂತ್ ಕುಮಾರ್ ಸಿಂಗ್. ಐ.ಪಿ.ಎಸ್ ಪೊಲೀಸ್ ಆಯುಕ್ತರು, ಬೆಂಗಳೂರು ನಗರ** ಆದನಾನು, ಮೇಲೆ ಸಕಾರಣಗಳೊಂದಿಗೆ ವಿವರಿಸಿದ ಅಂಶಗಳನ್ನು ಆಧರಿಸಿ, ಬೆಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಯ ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ, ಬೆಂಗಳೂರು ಬಳ್ಳಾರಿ ರಸ್ತೆಯ NH-44 ರ ಸರ್ವೀಸ್ ರಸ್ತೆಗೆ ಹೊಂದಿಕೊಂಡಿರುವ ಜಕ್ಕೂರು ರಸ್ತೆಯಲ್ಲಿ ಯಲಹಂಕ ರೈತರ ಸಂತೆಯಿಂದ HDFC School ತಿರುವಿನ ವರೆಗೆ 1.9 ಕಿ ಮೀ ರಸ್ತೆಯ ಎರಡು ಬದಿಯಲ್ಲಿ ವಾಹನಗಳ ನಿಲುಗಡೆ ನಿಷೇಧ (NO PARKING) ರಸ್ತೆಯನ್ನಾಗಿ, ಈ ಕೆಳಕಂಡಂತೆ ಅಧಿಸೂಚನೆ ಹೊರಡಿಸಿ ಆದೇಶಿಸಿರುತ್ತೇನೆ.

ವಾಹನಗಳ ನಿಲುಗಡೆ ನಿಷೇಧ (NO PARKING) ರಸ್ತೆಯನ್ನಾಗಿ ಅಧಿಸೂಚನೆ ಹೊರಡಿಸಿರುವ ರಸ್ತೆ ವಿವರ

ಯಲಹಂಕ ಸಂಚಾರ ಪೊಲೀಸ್ ಠಾಣೆ			
ರಸ್ತೆ	**ಇಂದ**	**ವರೆಗೆ**	**ದಿಕ್ಕು**
ಬೆಂಗಳೂರು ಬಳ್ಳಾರಿ ರಸ್ತೆ ಸರ್ವೀಸ್ ರಸ್ತೆಯ ಜಕ್ಕೂರು ರಸ್ತೆಯ	ಯಲಹಂಕ ರೈತರ ಸಂತೆಯಿಂದ	HDFC School ತಿರುವಿನ ವರೆಗೆ	ಪೂರ್ವ ಮತ್ತು ಪಶ್ಚಿಮ 1.9ಕಿ.ಮೀ
ಅಕ್ಷಾಂಶ:13.097819		ರೇಖಾಂಶ:77.60674	

ಅಂತೆಯೇ ಕಲಂ 116, ಮೋಟಾರು ವಾಹನ ಕಾಯ್ದೆ-1988 ಹಾಗೂ ಕಲಂ-04, ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ ರಲ್ಲಿನ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೇಲ್ಕಂಡಂತೆ ಸಂಚಾರ ವ್ಯವಸ್ಥೆ ಮಾರ್ಪಾಡುಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು (ನಿಯಮಾನುಸಾರ) ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಮೇಲ್ಕಂಡ ಸಂಚಾರ ಮಾರ್ಪಾಡು ದಿನಾಂಕ: 05.08.2026 ರಿಂದ ಜಾರಿಯಲ್ಲಿರುವಂತೆ ಆದೇಶಿಸಿರುತ್ತೇನೆ.

(ಈ ಆದೇಶವನ್ನು ನನ್ನ ಆಪ್ತ ಸಹಾಯಕರಿಗೆ ಉಕ್ತಲೇಖನ ನೀಡಿದ್ದು, ಗಣಕೀಕೃತ ಬೆರಳಚ್ಚು ಪ್ರತಿಯನ್ನು ಪರಿಶೀಲಿಸಿ ಈ ದಿನ ಸಹಿ ಮಾಡಿ ನನ್ನ ಕಛೇರಿಯಲ್ಲಿ ಉದ್ಘೋಷಿಸಿದೆ.)

(**ಸೀಮಾಂತ್ ಕುಮಾರ್ ಸಿಂಗ್, ಐ.ಪಿ.ಎಸ್**)
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

PR-1069

IN THE COURT OF SENIOR CIVIL JUDGE & JMFC.. AT:CHANNAGIRI, DAVANAGERE DIST

It here by notified to the public that the SANTHEBENNURU PS & BASAVAPATNA PS **DAVANGERE DIST, have seized the followng vehicles as climbed so for hence owner of the vehicles may pt their claim one month from the date od publication list of claimbed vehiles are laying in** SANTHEBENNURU PS & BASAVAPATNA PS **DAVANGERE DIST,, which have been seized under PF**

SANTHEBENNURU PS							
S.N	**CR NO /C MIS NO**	**CC NO**	**P,F NO**	**VEHECLE TYPE**	**REG NO**	**CHASSIS NO**	**ENGINE NO**
1.	CR NO 144/2020	2730/21	91/2021	MOTER BYKE	**KA-06/S-6742**	9203F194471	9203M250323
2.	CR NO 147/2021	1740/21	56 (A)/2022	MOTER BYKE	**KA-17/EY-0395**	MBLHAR208H4D11040	HA11ENH4D12635
3.	CR NO 149/2022	1146/23	102(A)/2022	CAR	**KA-17/N-5359**	MAT611450BPJ72285	100820000170752
4.	CR NO 109/2023	1831/21	102(A)/2022	MOTER BYKE	**KA-53/EG-7486**	MD2A12DZIECF30101	DJZCEF51145

5.	CR NO 103/2023	2424/23	102/2023	MOTER BYKE	**KA-17/V-7837**	06G29F25869	06G29E23683
6.	CR NO 215/2023	124/2024	112/2023	MOTER BYKE	**KA-04/HT-0106**	MD2A13EZAECA20393	DKZCEA15378
7.	CR NO 139/2022	1827/2023	87/2023	MOTER BYKE	**KA-17/ET-5872**	MA2A15BZ2FWF19421	JZZWFF39998
8.	CR NO 175/2013	34/2016	17/2014	ASHOKA LAYLAND LORRY	**KA-16 A-8233**	PNA084148& TPH502609	HGV
9.	CR NO 119/2018	348/2018	36(A)/19	TVS SCOOTY	**KA-18,V-8246**	MD626DG35B2D42237& OG3DB2447078	M/C WITH OUT GEAR
BASAVAPATNA PS							
10.	Cr No: 109/2020	**2275/21**	30/2021	Hero Honda CD Deluxe Bike	KA 17 W 8870	07C22E51399	07C23F23653
11.	Cr No: 114/2020	**1751/2022**	38/21	Hero Honda Splendor Pro Bike	KA17EL5807	HA10ELD9L11720	MBLHA10A2D9L00207
12.	Cr No: 30/2021	**36/2023**	89/2021	Bajaj Discover Bike	KA05HF1325	JNGBPM89146	MD2DSJNZZPCM76195
13.	Cr No: 134/21	**1218/2022**	25/22	Bajaj Discover Bike	KA17EU9012	JZZWFG08695	MD2A15BZXFWG25633
14.	Cr No: 118/2023	**02/2024**	99/23	Bajaj Discover Bike	KA27EL4356	JZYWHA16978	MD2A15BY3HWA00713
15.	Cr No: 34/2024	**926/2024**	34/2024	Bajaj Kawasaki Bike	KA14K4578	31MBEA21509	31FBEA352036
16.	Cr No: 54/2024	**2851/2024**	67/24	TVS Radeon Bike	KA18EH1690	KF1EK1303989	MD625HF15K1E04171
17.	Cr No: 01/2024	**2815/2024**	81/24	Bajaj Caliber Bike	KA17K5341	DDMBEM65961	DDFBEM45062
18.	Cr No: 01/2024	**2815/2024**	81/24	Bajaj Discover Bike	KA17EB2844	JBMBSH15033	MD2DSPAZZSWH14388
19.	Cr No: 97/2023	**1778/24**	46/24	Bajaj Discover Bike	KA 35S0694	JNGBRF72175	MD2DSJNZZRCF38191
20.	Cr No: 22/25	**1508/25**	76/25	TVS Fiero Bike	KA06S4453	M1208M150113	M1208F148165
21.	Cr No: 79/2024	**1021/25**	26/25	Hero Honda Passion Bike	KA15H9342	02J21M12924	02J21C09654
22.	Cr No: 187/23	**126/2024**	107/23	TVS Victor Bike	No Registration No Plate	EF1HG1596821	MD625MF17G1H95369

Place: DAVANGERE

Date:10-08-2026

THE COURT OF SENIOR CIVIL JUDGE & JMFC.

AT:CHANNAGIRI

SUPERINTENDENT OF POLICE, DAVANAGERE

PR-1070

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 171 ಸೇಇಸಿ 2023

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:08.06.2026.

ಮಾರ್ಪಾಡು

ಸರ್ಕಾರದ ದಿನಾಂಕ: 03.08.2024ರ ಸೇರ್ಪಡೆ ಆದೇಶ ಸಂಖ್ಯೆ: ಜಸಂಇ 171 ಸೇಇಸಿ 2024 ರಲ್ಲಿ ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-2) ಹುದ್ದೆಗೆ ಕಲ್ಯಾಣ-ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ಪ್ರಾದೇಶಿಕ ಮಟ್ಟದಲ್ಲಿ ಶೇ.75 ರಂತೆ ಹುದ್ದೆಗಳನ್ನು ಮೀಸಲಿರಿಸಿರುವ ಅನುಸೂಚಿ-2ನ್ನು ಇದರೊಂದಿಗೆ ಲಗತ್ತಿಸಲಾದ ಅನುಸೂಚಿ-2ರಂತೆ ಮಾರ್ಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಇನ್ನುಳಿದಂತೆ ಸದರಿ ಸೇರ್ಪಡೆ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹನುಮೇಗೌಡ. ಹೆಚ್)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸೇವೆಗಳು-ಬಿ)

ಅನುಸೂಚಿ-2

ಕ್ರ. ಸಂ	ಹುದ್ದೆಯ ಹೆಸರು	ವೇತನ ಶ್ರೇಣಿ	ಮಂಜೂರಾದ ವೃಂದ ಬಲ	ಮುಂಬಡ್ತಿ	ನೇರ ನೇಮಕಾತಿ	ನಿಯೋಜನೆ ಹುದ್ದೆಗಳು	ಹೈದ್ರಾಬಾದ್-ಕರ್ನಾಟಕ ಪ್ರದೇಶದ ವರಿಗಾಗಿ ಹುದ್ದೆಗಳನ್ನು ಗುರುತಿಸುವ ಕುರಿತು.				ಕಾಲಂ 4-11 ಒಟ್ಟು ವಿಕ್ಕುಳಿದ ವೃಂದ
							ಮುಂಬಡ್ತಿ	ನೇರ ನೇಮಕಾತಿ	ನಿಯೋಜನೆ	ಒಟ್ಟು	
1	2	3	4	5	6	7	8	9	10	11	12
ಗ್ರೂಪ್-ಎ ವೃಂದ ಶೇ. 75											
1	ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿಭಾಗ-2)	52650- 97100	45	34	0	0	34	0	0	34	11

(ಹನುಮೇಗೌಡ. ಹೆಚ್)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸೇವೆಗಳು-ಬಿ)

PR-1071

ಕರ್ನಾಟಕ ಸರ್ಕಾರ

ಸಂಖ್ಯೆ:ಕಂಇ 71 ಮುಆಬಿ 2026

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:07.08.2026

ಅಧಿಸೂಚನೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಲಂ 31(7)ರ ಅನ್ವಯ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಅಧಿಸೂಚಿತ ಸಂಸ್ಥೆಗಳ **ಬೀದರ್ ಜಿಲ್ಲೆಯ ಔರದ್ (ಬಿ) ತಾಲ್ಲೂಕಿನ ಒಟ್ಟು 07 ಆಸ್ತಿಗಳ** ವಿವರಗಳನ್ನು ಈ ಕೆಳಕಂಡಂತೆ ಸಾರ್ವಜನಿಕ ಮತ್ತು ಭಕ್ತಾದಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ನಮೂನೆ 1(ಡಿ)						
	1	2	3	4	5	
ಕ್ರ ಸಂ	ಅಧಿಸೂಚಿತ ಸಂಸ್ಥೆಯ ಹೆಸರು ಮತ್ತು ಅದು ಇರುವ ಸ್ಥಳ ಗ್ರಾಮ /ತಾಲ್ಲೂಕು/ಜಿಲ್ಲೆ	ಸರ್ವೆ ನಂ./ ಸಿಟಿಎಸ್ ನಂ./ ಖಾತಾ ನಂ./ ಮುನ್ಸಿ.ನಂ	ಪ್ರದೇಶ/ ಅಳತೆ/ ವ್ಯಾಪ್ತಿ	ಚಕ್ಕುಬಂದಿ	ಸ್ವತ್ತಿನ ವಿವರ	
					ಖಾಲಿ	ಕಟ್ಟಡ
1	ಶ್ರೀ ಪಾಂಡುರಂಗ ದೇವಸ್ಥಾನ,ಖೇರ್ಡಾ ಗ್ರಾಮ, ಔರದ್ (ಬಿ) ಹೋಬಳಿ, ಔರದ್ (ಬಿ) ತಾಲ್ಲೂಕು ,ಬೀದರ ಜಿಲ್ಲೆ	ಗ್ರಾಮಠಾಣ	404.68	ಪೂರ್ವಕ್ಕೆ:ಸಿ.ಸಿ.ರಸ್ತೆ ಪಶ್ಚಿಮಕ್ಕೆ:ಗೋಪಾಲ ತಂದೆ ಗ್ಯಾನೋಬಾ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ವಿಠಲ ತಂದೆ ಕೋಂಡಿಬಾ		404.68
2	ಶ್ರೀ ಮಾರುತಿ ದೇವಸ್ಥಾನ,ಮಣಿಗೇಂಪುರ ಗ್ರಾಮ, ಸಂತಪೂರ ಹೋಬಳಿ, ಔರದ್ (ಬಿ) ತಾಲ್ಲೂಕು ,ಬೀದರ ಜಿಲ್ಲೆ	ಗ್ರಾಮಠಾಣ	202.34	ಪೂರ್ವಕ್ಕೆ:ಖುಲ್ಲಾ ಜಾಗ ಪಶ್ಚಿಮಕ್ಕೆ:ಖುಲ್ಲಾ ಜಾಗ ಉತ್ತರಕ್ಕೆ: ಖುಲ್ಲಾ ಜಾಗ ದಕ್ಷಿಣಕ್ಕೆ: ರಸ್ತೆ		202.34
3	ಶ್ರೀ ಮಾರುತಿ ದೇವಸ್ಥಾನ,,ಬಾಚೇಪಳ್ಳಿ ಗ್ರಾಮ, ಸಂತಪೂರ ಹೋಬಳಿ, ಔರದ್ (ಬಿ) ತಾಲ್ಲೂಕು ,ಬೀದರ ಜಿಲ್ಲೆ	ಗ್ರಾಮಠಾಣ	151.75	ಪೂರ್ವಕ್ಕೆ:ಖುಲ್ಲಾ ಜಾಗ ಪಶ್ಚಿಮಕ್ಕೆ:ರಸ್ತೆ ಉತ್ತರಕ್ಕೆ: ಖುಲ್ಲಾ ಜಾಗ ದಕ್ಷಿಣಕ್ಕೆ: ದೇವಸ್ಥಾನದ ಮಂಟಪ		151.75
4	ಶ್ರೀ ಭವಾನಿ ದೇವಸ್ಥಾನ, ನಿಟ್ಟೂರು (ಕೆ) ಗ್ರಾಮ, ಸಂತಪೂರ ಹೋಬಳಿ, ಔರದ್ (ಬಿ) ತಾಲ್ಲೂಕು ,ಬೀದರ ಜಿಲ್ಲೆ	ಗ್ರಾಮಠಾಣ	101.17	ಪೂರ್ವಕ್ಕೆ:ಖುಲ್ಲಾ ಜಾಗ ಪಶ್ಚಿಮಕ್ಕೆ:ಖುಲ್ಲಾ ಜಾಗ ಉತ್ತರಕ್ಕೆ: ಲಾ.ಗು ಸ.ನಂ 134 ದಕ್ಷಿಣಕ್ಕೆ: ರಸ್ತೆ		101.17
5	ಶ್ರೀ ಮಹಾದೇವ ಮಂದಿರ ಹೋಕ್ರಾಣಾ ಗ್ರಾಮ, ಔರದ್ (ಬಿ) ಹೋಬಳಿ, ಔರದ್ (ಬಿ) ತಾಲ್ಲೂಕು ,ಬೀದರ ಜಿಲ್ಲೆ	ಗ್ರಾಮಠಾಣ	101.17	ಪೂರ್ವಕ್ಕೆ:ತ್ರಿಮೂಖ ತಂದೆ ಭೀಮರಾವ್ ಪಶ್ಚಿಮಕ್ಕೆ:ಖುಲ್ಲಾ ಜಾಗ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಲಕ್ಮೀ ಬಾಯಿ ಗಂಡ ಭಾನುದಾಸರವರ ಮನೆ		101.17

6	ಶ್ರೀ ಪಾಂಡುರಂಗ ದೇವಸ್ಥಾನ,ಎನಗುಂದಾ ಗ್ರಾಮ,ಚಿಂತಾಕಿ ಹೋಬಳಿ, ಔರದ್ (ಬಿ) ತಾಲ್ಲೂಕು ,ಬೀದರ ಜಿಲ್ಲೆ	ಗ್ರಾಮಠಾಣ	101.17	ಪೂರ್ವಕ್ಕೆ:ರಸ್ತೆ ಪಶ್ಚಿಮಕ್ಕೆ:ವಿಠಲ ರೆಡ್ಡಿ ತಂದೆ ಗ್ಯಾನರೆಡ್ಡಿ ಉತ್ತರಕ್ಕೆ: ಧನರಾಜ್ ಪಾಟೀಲ ರವರ ಮನೆ ದಕ್ಷಿಣಕ್ಕೆ: ವಿಠಲ ರೆಡ್ಡಿ ತಂದೆ ಗ್ಯಾನರೆಡ್ಡಿ		101.17
7	ಶ್ರೀ ಅಮರೇಶ್ವರ ದೇವಸ್ಥಾನ,ಔರದ್ (ಬಿ)ಗ್ರಾಮ,ಔರದ್ (ಬಿ)ಹೋಬಳಿ, ಔರದ್ (ಬಿ) ತಾಲ್ಲೂಕು ,ಬೀದರ ಜಿಲ್ಲೆ	ಗ್ರಾಮಠಾಣ	2225.75	ಪೂರ್ವಕ್ಕೆ:ರಸ್ತೆ ಪಶ್ಚಿಮಕ್ಕೆ:ಗ್ರಾಮಠಾಣ ಉತ್ತರಕ್ಕೆ: ಗ್ರಾಮಠಾಣ ದಕ್ಷಿಣಕ್ಕೆ: ಸ.ನಂ 95		2225.75

ತಾಲ್ಲೂಕು: ಔರದ್ (ಬಿ)
ಜಿಲ್ಲೆ : ಬೀದರ್ ಜಿಲ್ಲೆ
ಒಟ್ಟು ದೇವಾಲಯ ಸಂಖ್ಯೆ: 07
ಒಟ್ಟು ಆಸ್ತಿಗಳ ಸಂಖ್ಯೆ: 07

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾಲಾ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಧಾರ್ಮಿಕ ದತ್ತಿ)

PR-1072

ಕರ್ನಾಟಕ ಸರ್ಕಾರ

ಸಂಖ್ಯೆ:ಕಂಇ 68 ಮುಆಬಿ 2026

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:07.08.2026

ಅಧಿಸೂಚನೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಲಂ 31(7)ರ ಅನ್ವಯ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಅಧಿಸೂಚಿತ ಸಂಸ್ಥೆಗಳ **ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಒಟ್ಟು 158 ಆಸ್ತಿಗಳ** ವಿವರಗಳನ್ನು ಈ ಕೆಳಕಂಡಂತೆ ಸಾರ್ವಜನಿಕ ಮತ್ತು ಭಕ್ತಾದಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ನಮೂನೆ 1 (ಡಿ)						
	1	**2**	**3**	**4**	**5**	
ಕ್ರ. ಸಂ.	**ಅಧಿಸೂಚಿತ ಸಂಸ್ಥೆಯ ಹೆಸರು ಮತ್ತು ಅದು ಇರುವ ಸ್ಥಳ ಗ್ರಾಮ / ತಾಲ್ಲೂಕು/ಜಿ ಲ್ಲೆ**	**ಸರ್ವೆ ನಂ./ ಸಿಟಿಎಸ್ ನಂ./ ಖಾತಾ ನಂ./ಮುನ್ಸಿ. ನಂ**	**ಪ್ರದೇಶ/ ಅಳತೆ/ ವ್ಯಾಪ್ತಿ**	**ಚಕ್ಕುಬಂದಿ**	**ಸ್ವತ್ತಿನ ವಿವರ**	
					ಖಾಲಿ	**ಕಟ್ಟಡ**

1	ಶ್ರೀ ಮಾರುತಿ/ಹಣಮಂತ ದೇವಸ್ಥಾನ,ಅಮಟೂರ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 55 A	212.97 ಚ ಮೀ	ಪೂರ್ವ:ದ್ಯಾಮವ್ವ ದೇವಸ್ಥಾನ ಪಶ್ಚಿಮ: ರಸ್ತೆ ಉತ್ತರಕ್ಕೆ:ಬಸಪ್ಪ ಗಂಗಪ್ಪ ಗೌಡರ, ನಾಗಪ್ಪ ಗಂಗಪ್ಪ ಗೌಡರ ದಕ್ಷಿಣಕ್ಕೆ:ರಸ್ತೆ	126.43 ಚ ಮೀ	86.54 ಚ ಮೀ
2	ಶ್ರೀ ಬಸವೇಶ್ವರ ದೇವಸ್ಥಾನ, ಚಿವಟಗುಂಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ115	197.04 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ರಸ್ತೆ ಉತ್ತರಕ್ಕೆ:ಶ್ರೀ ವೀರಭದ್ರೇಶ್ವರ ದೇವಸ್ಥಾನ ದಕ್ಷಿಣಕ್ಕೆ:ರಸ್ತೆ	126.84 ಚ ಮೀ	70.20 ಚ ಮೀ
3	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ,ಬೆಳವಾಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ರೀಸ.ನಂ 201	85.91 ಚ ಮೀ	ಪೂರ್ವ:ಸ.ನಂ 201 ರ ಪೈಕಿ ಉಳಿದ ಜಾಗೆ ಪಶ್ಚಿಮ:ಸ.ನಂ 201 ರ ಪೈಕಿ ಉಳಿದ ಜಾಗೆ ಉತ್ತರಕ್ಕೆ:ಸ.ನಂ 201 ರ ಪೈಕಿ ಉಳಿದ ಜಾಗೆ ದಕ್ಷಿಣಕ್ಕೆ:ಸ.ನಂ 201 ರ ಪೈಕಿ ಉಳಿದ ಜಾಗೆ		85.91 ಚ ಮೀ
4	ಶ್ರೀ ಹನುಮಂತ ದೇವಸ್ಥಾನ,ಚಿಕ್ಕಬಾಗೇವಾಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ180	286.58 ಚ ಮೀ	ಪೂರ್ವ:ಸ.ನಂ 180 ಪಶ್ಚಿಮ:ಸ.ನಂ 180 ಉತ್ತರಕ್ಕೆ:ಸ.ನಂ 180 ದಕ್ಷಿಣಕ್ಕೆ:ಸ.ನಂ 180	191.47 ಚ ಮೀ	95.11 ಚ ಮೀ
5	ಶ್ರೀ ಗ್ರಾಮದೇವಿ ದೇವಸ್ಥಾನ,ಚಿಕ್ಕಬಾಗೇವಾಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ458	341.79 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ರಸ್ತೆ ಉತ್ತರಕ್ಕೆ:ರಸ್ತೆ,ಮಹೇಂದ್ರ ದೇವೇಂದ್ರ ಪಾರಿಶ್ವಾಡ ದಕ್ಷಿಣಕ್ಕೆ:ರಸ್ತೆ	13.82 ಚ ಮೀ	327.97 ಚ ಮೀ
6	ಶ್ರೀ ಮೂರುಮುಕದೆಮ್ಮ ದೇವಸ್ಥಾನ,ಬೆಳವಾಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ರೀಸ.ನಂ	54.60 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ಗಂಗಪ್ಪ ಹುಂಬಿ ಉತ್ತರಕ್ಕೆ:ಗಂಗಯ್ಯ ನಾಗಯ್ಯ ಉಜ್ಜಯ್ಯನವರ ದಕ್ಷಿಣಕ್ಕೆ:ಶಂಕರಯ್ಯ ಶಿದ್ರಾಮಯ್ಯ ಕಾರಿಮನಿ		54.60 ಚ ಮೀ
7	ಶ್ರೀ ರಾಮಲಿಂಗೇಶ್ವರ ದೇವಸ್ಥಾನ,ಬೈಲವಾಡ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 2	333.29 ಚ ಮೀ	ಪೂರ್ವ:ಸರಕಾರಿ ಆಯುರ್ವೇದ ಚಿಕಿತ್ಸಾಲಯ ಪಶ್ಚಿಮ:ಅಂಗನವಾಡಿ ಕೇಂದ್ರ ಉತ್ತರಕ್ಕೆ:ರಸ್ತೆ	204.06 ಚ ಮೀ	129.23 ಚ ಮೀ

				ದಕ್ಷಿಣಕ್ಕೆ:ಶಿವಬಸಪ್ಪ ಗಡಿಗೆಪ್ಪ ದೇವಲಾಪೂರ		
8	ಶ್ರೀ ಹಣಮಂತ ದೇವಸ್ಥಾನ,ಬೆಳವಾಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 1081/2	606.60 ಚ ಮೀ	ಪೂರ್ವ:ಕರಿಗಾರವರ ಮನೆಗಳು ಪಶ್ಚಿಮ:ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೆಳವಾಡಿ ಉತ್ತರಕ್ಕೆ:ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೆಳವಾಡಿ ದಕ್ಷಿಣಕ್ಕೆ:ರಸ್ತೆ	579.24 ಚ ಮೀ	27.36 ಚ ಮೀ
9	ಶ್ರೀ ಹನುಮಂತ ದೇವಸ್ಥಾನ,ಹಿರೇಬೆಳ್ಳಿಕಟ್ಟಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಸರ್ವೆ ನಂ 78 ರ ಪೈಕಿ	837.33 ಚ ಮೀ	ಪೂರ್ವ:ವಹಿವಾಟು ರಸ್ತೆ ಪಶ್ಚಿಮ:ಸರ್ವೆ ನಂಬರ 77 ಉತ್ತರಕ್ಕೆ:ಸರ್ವೆ ನಂಬರ 78 ರ ಜಮೀನು ದಕ್ಷಿಣಕ್ಕೆ:ಶ್ರೀ ಗರಿ ಮಲ್ಲೇಶ್ವರ & ಮಾದವಾನಂದ ಆಶ್ರಮ	673.41 ಚ ಮೀ	163.92 ಚ ಮೀ
10	ಶ್ರೀ ದುರದುಂಡೇಶ್ವರ ದೇವಸ್ಥಾನ,ಚಿಕ್ಕಬಾಗೇವಾಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ466	89.11 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ನೀಲವ್ವ ದುಂಡಪ್ಪ ವಣ್ಣೂರು ಉತ್ತರಕ್ಕೆ:ಗಂಗಪ್ಪ ವೀರಭದ್ರಪ್ಪ ಉಗರಶೆಟ್ಟಿ ದಕ್ಷಿಣಕ್ಕೆ:ಸಿಂಗವ್ವ ಶಿದ್ಲಿಂಗಪ್ಪ ಉನಕಲ್ಲ	24.98 ಚ ಮೀ	64.13 ಚ ಮೀ
11	ಶ್ರೀ ಬಸವೇಶ್ವರ ದೇವಸ್ಥಾನ,ಗುಡದೂರ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ324	1322.3750 ಚ ಮೀ	ಪೂರ್ವ:ಸ.ನಂ 1 ಪಶ್ಚಿಮ: ರಸ್ತೆ ಉತ್ತರಕ್ಕೆ:ಸ.ನಂ 1 ದಕ್ಷಿಣಕ್ಕೆ:ಸ.ನಂ 1	1229.565 ಚ ಮೀ	92.81 ಚ ಮೀ
12	ಶ್ರೀ ಬಸವೇಶ್ವರ ದೇವಸ್ಥಾನ,ಲಿಂಗದಳ್ಳಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ226/1	438.45 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ರಸ್ತೆ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ಸರ್ಕಾರಿ ಶಾಲೆ	276.853 ಚ ಮೀ	161.597 ಚ ಮೀ
13	ಶ್ರೀ ಮಾರುತಿ ದೇವಸ್ಥಾನ,ಲಿಂಗದಳ್ಳಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 277/2	140.415 ಚ ಮೀ	ಪೂರ್ವ:ಪಂಚಾಯತ ಜಾಗ ಪಶ್ಚಿಮ: ಪಂಚಾಯತ ಜಾಗ ಉತ್ತರಕ್ಕೆ:ಗರಡಿಮನೆ ದಕ್ಷಿಣಕ್ಕೆ:ಪಂಚಾಯತ ಜಾಗ	75.9 ಚ ಮೀ	64.515 ಚ ಮೀ

14	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ, ಬೇವಿನಕೊಪ್ಪ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 261	2179.36 ಚ ಮೀ	ಪೂರ್ವ:ವಹಿವಾಟು ರಸ್ತೆ ಪಶ್ಚಿಮ: ಸ.ನಂ 44 ರ ಜಮೀನು ಉತ್ತರಕ್ಕೆ:ಸ.ನಂ 45 ರ ಪೈಕಿ ದಕ್ಷಿಣಕ್ಕೆ:ರಸ್ತೆ	1782.16 ಚ ಮೀ	397.20 ಚ ಮೀ
15	ಶ್ರೀ ಮಾರುತಿ ದೇವಸ್ಥಾನ, ಕೊರವಿಕೊಪ್ಪ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ19	528.75 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ಸ.ನಂ 26 ರ ಜಮೀನು ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ಸ.ನಂ 26 ರ ಜಮೀನು	462.13 ಚ ಮೀ	66.62 ಚ ಮೀ
16	ಶ್ರೀ ವಿಠ್ಠಲ ದೇವಸ್ಥಾನ, ಬೈಲಹೊಂಗಲ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಸಿ ಸ ನಂ 2396	48.77 ಚ ಮೀ	ಪೂರ್ವ:ಸಿಸ ನಂ 2383 ಪಶ್ಚಿಮ:ರಸ್ತೆ ಉತ್ತರಕ್ಕೆ:ಸಿ ಸ ನಂ 2397 ದಕ್ಷಿಣಕ್ಕೆ:ಸಿ ಸ ನಂ 2395		48.77 ಚ ಮೀ
17	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ, ಬೈಲಹೊಂಗಲ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಸಿ ಸ ನಂ 1878 & 1877	349.50 ಚ ಮೀ	ಪೂರ್ವ:ರಸ್ತೆ,ಸಿಸ ನಂ 1876 ಪಶ್ಚಿಮ:ರಸ್ತೆ ಉತ್ತರಕ್ಕೆ:ಸಿ ಸ ನಂ 1939,1940,1941 ದಕ್ಷಿಣಕ್ಕೆ:ರಸ್ತೆ	229.85 ಚ ಮೀ	119.65 ಚ ಮೀ
18	ಶ್ರೀ ರಾಮಲಿಂಗೇಶ್ವರ ದೇವಸ್ಥಾನ,ಅನಿಗೋಳ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 162,163,164, 165,551,557, 533	2674.40 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ಕಸ್ತೂರೆವ್ವ ರಾಮಲಿಂಗಪ್ಪ ಭಜಂತ್ರಿ ,ರಮೇಶ ಮಲ್ಲಪಪ್ ಹಡಪದ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ಪುಂಡಲೀಕ ಯಮನಪ್ಪ ಅಜ್ಜಪ್ಪನವರ,ಚನಬಸಯ್ಯ ಅಪ್ಪಯ್ಯ ಪೂಜೇರ,ಮಹಾರುದ್ರಯ್ಯ ಸೋಮಯ್ಯ ಮಠಪತ,ಬಸಲಿಂಗಪ್ಪ ತಾಯಪ್ಪ ವಗೈರರು	1378.81 ಚ ಮೀ	1295.59 ಚ ಮೀ
19	ಶ್ರೀ ಕಲ್ಮೇಶ್ವರ ದೇವಸ್ಥಾನ, ಹೊಳಿನಾಗಲಾಪೂರ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ252/ಅ,252/ಬ	758.675 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ಉದ್ವಪ್ಪ ಮಲ್ಲಪ್ಪ,ಉಳ್ಳೇಗಡಿ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ಹಣವಂತ ಭಜಂತ್ರಿ ಬಸಪ್ಪ,ಬಾಳಪ್ಪ ಮಬನೂರ	462.805 ಚ ಮೀ	295.87 ಚ ಮೀ

20	ಶ್ರೀ ಹಣಮಂತ ದೇವಸ್ಥಾನ,ಹಣ್ಣೆಕೇರಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 896 ಡಿ	825 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ನಾಯ್ಯಪ್ಪ ನಂದಿ ಇವರ ಜಮೀನು,ಕಲ್ಮೇಶ್ವರ ದೇವಸ್ಥಾನ ಉತ್ತರಕ್ಕೆ:ರಸ್ತೆ,ಹಳ್ಳ ದಕ್ಷಿಣಕ್ಕೆ:ರಾಮಪ್ಪ ಮಜ್ಜಗಿ ಇವರ ಜಮೀನು	753.5 ಚ ಮೀ	71.5 ಚ ಮೀ
21	ಶ್ರೀ ಕಲ್ಮೇಶ್ವರ ದೇವಸ್ಥಾನ,ಹಣ್ಣೆಕೇರಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 896 ಸಿ	225 ಚ ಮೀ	ಪೂರ್ವ:ಹಣಮಂತ ದೇವಸ್ಥಾನದ ಜಾಗೆ ಪಶ್ಚಿಮ: ನಾಯ್ಯಪ್ಪ ನಂದಿ ಇವರ ಜಮೀನು ಉತ್ತರಕ್ಕೆ:ರಸ್ತೆ,ಹಳ್ಳ ದಕ್ಷಿಣಕ್ಕೆ:ಹಣಮಂತ ದೇವಸ್ಥಾನದ ಜಾಗೆ	214.5 ಚ ಮೀ	10.5 ಚ ಮೀ
22	ಶ್ರೀ ಸಿದ್ದ ಬಸವೇಶ್ವರ ದೇವಸ್ಥಾನ,ಹಣ್ಣೆಕೇರಿ ಗ್ರಾಮ ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 185	1009.97 ಚ ಮೀ	ಪೂರ್ವ:ಗ್ರಾಮ ಪಂಚಾಯತಿ ಅಲ್ಲಪ್ಪನವರ ಮನೆ ಪಶ್ಚಿಮ: ರಸ್ತೆ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ರಸ್ತೆ	343.5 ಚ ಮೀ	666.47 ಚ ಮೀ
23	ಶ್ರೀ ಗ್ರಾಮದೇವಿ ದೇವಸ್ಥಾನ,ಹೊಳಿ ಹೊಸುರು ಗ್ರಾಮ ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 1/1	1356.6 ಚ ಮೀ	ಪೂರ್ವ:ವಿಶ್ವನಾಥ ಹಲಕಿ ಪಶ್ಚಿಮ:ರಸ್ತೆ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ರಸ್ತೆ	1056.6 ಚ ಮೀ	300 ಚ ಮೀ
24	ಶ್ರೀ ಗ್ರಾಮದೇವಿ ದೇವಸ್ಥಾನ,ಬೈಲಹೊಂಗಲ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಸಿ ಸ ನಂ 1882	103.86 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ಸಿ ಸ ನಂ 1932,1883 ಉತ್ತರಕ್ಕೆ:ಸಿ ಸ ನಂ 1933,1881 ದಕ್ಷಿಣಕ್ಕೆ:ರಸ್ತೆ		103.86 ಚ ಮೀ
25	ಶ್ರೀ ಬಸವೇಶ್ವರ ದೇವಸ್ಥಾನ,ಹೊಳಿ ಹೊಸುರು ಗ್ರಾಮ ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ305/1 ,305/2	502.24 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ಅಂಗನಾವಾಡಿ ರಸ್ತೆ ಉತ್ತರಕ್ಕೆ:ಚನಬಸಯ್ಯ ಬಸಯ್ಯ ಪೂಜೇರ ದಕ್ಷಿಣಕ್ಕೆ:ರಸ್ತೆ	271.96 ಚ ಮೀ	230.28 ಚ ಮೀ
26	ಶ್ರೀ ಗ್ರಾಮದೇವಿ ದೇವಸ್ಥಾನ,ಕೆಂಗಾನೂರ ಗ್ರಾಮ ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 68/2	198.9 ಚ ಮೀ	ಪೂರ್ವ:ಸಾರ್ವಜನಿಕ ಜಾಗೆ(ಸಂತೆ ಕಟ್ಟೆ) ಪಶ್ಚಿಮ:ಸುಶೀಲವ್ವ ಕಾಳಪ್ಪ ಬಡಿಗೇರ ಉತ್ತರಕ್ಕೆ:ರಸ್ತೆ	114.4 ಚ ಮೀ	84.5 ಚ ಮೀ

				ದಕ್ಷಿಣಕ್ಕೆ:ಯಮನೂರಪ್ಪ ನ ದೇವಸ್ಥಾನ		
27	ಶ್ರೀ ಬಸವೇಶ್ವರ ದೇವಸ್ಥಾನ,ಗ ಣಿಕೊಪ್ಪ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ188 ಎ	29 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ಶಿವನಗೌಡ ಕಲಗೌಡ ಕನ್ನಾಗೌಡ್ರು ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ರಸ್ತೆ		29 ಚ ಮೀ
28	ಶ್ರೀ ಮಾರುತಿ ದೇವಸ್ಥಾನ, ಹೊಳಿ ಹೊಸುರು ಗ್ರಾಮ ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 491	172.59 ಚ ಮೀ	ಪೂರ್ವ:ರಾಮನಗೌಡ ಪಾಟೀಲ ಪಶ್ಚಿಮ:ಅಂಗನವಾಡಿ ಕೇಂದ್ರ,ಗ್ರಾಮ ಪಂಚಾಯತಿ ಆಸ್ತಿ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ಬಸವಣಿಪ್ಪ ಕಂಬಾರ	114.59 ಚ ಮೀ	58 ಚ ಮೀ
29	ಶ್ರೀ ಮಲ್ಲಿಕಾರ್ಜುನ ದೇವಸ್ಥಾ ನ, ಗೊವನಕೊಪ್ಪ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ226	102.83 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ಆತ್ಮನಂದ ಆನಿಕಿವಿ ಉತ್ತರಕ್ಕೆ:ಈರಪ್ಪ ಮಡಿವಾಳಪ್ಪ ಹೊಂಗಲ ದಕ್ಷಿಣಕ್ಕೆ:ರಸ್ತೆ	41.32 ಚ ಮೀ	61.51 ಚ ಮೀ
30	ಶ್ರೀ ಉಡಚಮ್ಮ ದೇವಿ ದೇವಸ್ಥಾನ, ಗೊವನಕೊಪ್ಪ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ291	38.4 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ಮಲ್ಲಪ್ಪ ವಗ್ಗನ್ನವರ ಉತ್ತರಕ್ಕೆ:ರುದ್ರಪ್ಪ ನೊರಜಪ್ಪನವರ ದಕ್ಷಿಣಕ್ಕೆ:ರಸ್ತೆ		38.4 ಚ ಮೀ
31	ಶ್ರೀ ಬಸವೇಶ್ವರ ದೇವಸ್ಥಾನ, ಸಾಣಿಕೊಪ್ಪ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ142	114.38 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ರಸ್ತೆ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ರಸ್ತೆ		114.38 ಚ ಮೀ
32	ಶ್ರೀ ಗ್ರಾಮದೇವಿ ದೇವಸ್ಥಾನ,ಸಾಣಿಕೊಪ್ಪ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ17	204.16 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ಯಲ್ಲವ್ವ ನಿಂಗಪ್ಪ ಕುರಬರ ಉತ್ತರಕ್ಕೆ:ಬಾಬು ಶಂಕರೆಪ್ಪ ಬಡಿಗೇರ ದಕ್ಷಿಣಕ್ಕೆ:ಬಾಬು ಕಾಳಪ್ಪ ಬಡಿಗೇರ	16.02 ಚ ಮೀ	188.14 ಚ ಮೀ

33	ಶ್ರೀ ಮಾರುತಿ ದೇವಸ್ಥಾನ, ಯರಡಾಲ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ15/2	51.49 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ರಾಯಪ್ಪ ನಿಂಗಪ್ಪ ಕರಿಮುದಕನವರ ಉತ್ತರಕ್ಕೆ:ಶ್ರೀ ಕಲ್ಮೇಶ್ವರ ದೇವಸ್ಥಾನ ದಕ್ಷಿಣಕ್ಕೆ:ರಸ್ತೆ	16.09 ಚ ಮೀ	35.40 ಚ ಮೀ
34	ಶ್ರೀ ಗ್ರಾಮದೇವತೆ ದೇವಸ್ಥಾನ,ತುರಕರಶೀಗಿಹಳ್ಳಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ277/1,277/2	286.625 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ಪುಂಡಲೀಕ ಪೂಜೇರ ಉತ್ತರಕ್ಕೆ:ದೊಡಪ್ಪ ಮರಿತಮ್ಮನವರ,ನಾಗನ ಗೌಡ ಕಲ್ಲನಗೌಡ ಪಾಟೀಲ ದಕ್ಷಿಣಕ್ಕೆ:ರಸ್ತೆ	215.015 ಚ ಮೀ	71.61 ಚ ಮೀ
35	ಶ್ರೀ ಸಂಗಮೇಶ್ವರ ದೇವಸ್ಥಾನ,ತಿಗಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 235	336 ಚ ಮೀ	ಪೂರ್ವ:ಕೆರೆ ಪಶ್ಚಿಮ:ಶಿವರುದ್ರಪ್ಪ ಬಸವಣ್ಣೆಪ್ಪ ಹಾದಿಮನಿ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ಪಂಚಾಯತ ಖುಲ್ಲಾ ಜಾಗ	208 ಚ ಮೀ	128 ಚ ಮೀ
36	ಶ್ರೀ ಕಲ್ಮೇಶ್ವರ ದೇವಸ್ಥಾನ,ಸಂಗೊಳ್ಳಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಆಸ್ತಿ ಸಂಖ್ಯೆ 505	118.80 ಚ ಮೀ	ಪೂರ್ವ:ಖುಲ್ಲಾ ಜಾಗೆ ಪಶ್ಚಿಮ:ಖುಲ್ಲಾ ಜಾಗೆ ಉತ್ತರಕ್ಕೆ:ಪಂಚಾಯತ ಖುಲ್ಲಾ ಜಾಗೆ ದಕ್ಷಿಣಕ್ಕೆ:ಮಾರುತಿ ದೇವಸ್ಥಾನ		118.80 ಚ ಮೀ
37	ಶ್ರೀ ಮಾರುತಿ ದೇವಸ್ಥಾನ,ಸಂಗೊಳ್ಳಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಆಸ್ತಿ ಸಂಖ್ಯೆ 505/1	40.15 ಚ ಮೀ	ಪೂರ್ವ:ಖುಲ್ಲಾ ಜಾಗೆ ಪಶ್ಚಿಮ:ಖುಲ್ಲಾ ಜಾಗೆ ಉತ್ತರಕ್ಕೆ:ಕಲ್ಮೇಶ್ವರ ಮತ್ತು ಬಸವೇಶ್ವರ ದೇವಸ್ಥಾನ ದಕ್ಷಿಣಕ್ಕೆ:ವಹಿವಾಟು ರಸ್ತೆ		40.15 ಚ ಮೀ
38	ಶ್ರೀ ಗ್ರಾಮದೇವಿ ದೇವಸ್ಥಾನ,ಸಂಗೊಳ್ಳಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ		354 ಚ ಮೀ	ಪೂರ್ವ:ಖುಲ್ಲಾ ಜಾಗೆ ಪಶ್ಚಿಮ:ರಸ್ತೆ ಉತ್ತರಕ್ಕೆ:ಖುಲ್ಲಾ ಜಾಗೆ ದಕ್ಷಿಣಕ್ಕೆ:ಖುಲ್ಲಾ ಜಾಗೆ		354 ಚ ಮೀ
39	ಶ್ರೀ ಗ್ರಾಮ ದೇವಿ ದೇವಸ್ಥಾನ,ಗುಡದೂರ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ66/ ಎ	2772.52 ಚ ಮೀ	ಪೂರ್ವ:ರಸ್ತೆ ಪಶ್ಚಿಮ: ರಸ್ತೆ ಉತ್ತರಕ್ಕೆ:ಸ.ನಂ 1,ಅಂಗನವಾಡಿ ಕೇಂದ್ರ ದಕ್ಷಿಣಕ್ಕೆ:ರಸ್ತೆ	2616.12 ಚ ಮೀ	156.4 ಚ ಮೀ

40	ಶ್ರೀ ಕಲ್ಮೇಶ್ವರ ದೇವಸ್ಥಾನ,ಯರಡಾಲ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ15/1	58.20 ಚ ಮೀ	ಪೂರ್ವ:ರಸ್ತೆ ಪಶ್ಚಿಮ:ರಾಮಪ್ಪ ನಿಂಗಪ್ಪ ಕರಿಮುದಕನವರ ಉತ್ತರಕ್ಕೆ:ನಾಗಯ್ಯ ದೊಡ್ಡವೀರಯ್ಯ ಪೂಜೇರ,ಈರಯ್ಯ ಬಸಯ್ಯ ಪೂಜೇರ ದಕ್ಷಿಣಕ್ಕೆ:ಶಿವಬಸಪ್ಪ ಮಡಿವಾಳಪ್ಪ ವಾರದ	22.80 ಚ ಮೀ	35.40 ಚ ಮೀ
41	ಶ್ರೀ ಗ್ರಾಮದೇವಿ ದೇವಸ್ಥಾನ,ಲಕ್ಕುಂಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ285	98.4 ಚ ಮೀ	ಪೂರ್ವ:ಸಂಗಯ್ಯ ಬಾಳಯ್ಯ ಕುಲಕರ್ಣಿ ಪಶ್ಚಿಮ:ರಸ್ತೆ ಉತ್ತರಕ್ಕೆ:ಶಿವಪ್ಪ ಮ ಬಡಿಗೇರ,ಗುರುಶಿದ್ವಪ್ಪ ಕುಂದರನಾಡ,ಗೂಡಚಪ್ಪ ಬಡಿಗೇರ ದಕ್ಷಿಣಕ್ಕೆ:ರಸ್ತೆ	34.2 ಚ ಮೀ	64.2 ಚ ಮೀ
42	ಶ್ರೀ ಮಾರುತಿ ದೇವಸ್ಥಾನ,ಲಕ್ಕುಂಡಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ314	492.77 ಚ ಮೀ	ಪೂರ್ವ:ಸಮುದಾಯ ಭವನ,ಯಲ್ಲಪ್ಪ ಬಸಲಿಂಗಪ್ಪ ತೋಟಗಿ ಪಶ್ಚಿಮ:ಈಶ್ವರ ಕುಂದರನಾಡ,ಕಸ್ತೂರವ್ವಾ ಹೂಗಾರ ಉತ್ತರಕ್ಕೆ:ಆಶೋಕ ಕಾಚಿ ದಕ್ಷಿಣಕ್ಕೆ:ರಸ್ತೆ	319.93 ಚ ಮೀ	172.84 ಚಮೀ
43	ಶ್ರೀ ದುರ್ಗಾದೇವಿ ದೇವಸ್ಥಾನ,ಉಡಿಕೇರಿ ಗ್ರಾಮ ,ಬೈಲಹೊಂಗಲ ತಾಲ್ಲೂಕು ಬೆಳಗಾವಿ ಜಿಲ್ಲೆ	ಪಂಚಾಯತ ಆಸ್ತಿ ನಂ 361/ಅ,370,371,372,374,375,375ಅ	968.85 ಚ ಮೀ	ಪೂರ್ವ:ಮಲ್ಲಿಕಾರ್ಜುನ ತಡಗೋಡ,ಮೂಗಪ್ಪ ಬಸಪ್ಪ ಗೂಳಪ್ಪನವರ,ಈರಣ್ಣ ಪೂಜೇರಿ ಪಶ್ಚಿಮ: ಶಿವಗಂಗವ್ವ ವೀರಪ್ಪ ಹಿತ್ತಲಮನಿ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ನಾಗಯ್ಯ ಪರವಯ್ಯ ಸುತಗಟ್ಟಿ,ಈರಯ್ಯ ಪರವಯ್ಯ ಸುತಗಟ್ಟಿ,ಬಸವ್ವ ಬಸಯ್ಯ ಪೂಜೇರಿ,ಸುಮಿತ್ರ ಹಡಪದ,ಮಂಜುನಾಥ ವಿರುಪಾಕ್ಷಯ್ಯ ಸುತಗಟ್ಟಿ	523.33 ಚ ಮೀ	445.52 ಚ ಮೀ

